ಸಂಪುಟ 01 । ಸಂಚಿಕೆ 222 ಶುಕ್ರವಾರ 16 ಅಕ್ಟೋಬರ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH
ಕನ್ನಡ ದಿನ ಪತ್ರಿಕೆ
ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ
REGIONAL KANNADA DAILY MORNING
RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1) ವಿಶ್ವ ಆಹಾರ ದಿನ (World Food Day) ಹಸಿವು ನಿವಾರಣೆ, ಆಹಾರ ಭದ್ರತೆ ಮತ್ತು ಪೌಷ್ಟಿಕ ಆಹಾರದ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ದಿನ.

2)ವಿಶ್ವ ಬೆನ್ನುಮೂಳೆ ದಿನ (World Spine Day) ಬೆನ್ನುಮೂಳೆಯ ಆರೋಗ್ಯ ಮತ್ತು ಅದರ ಆರೈಕೆಯ ಬಗ್ಗೆ ಜಾಗೃತಿ ಮೂಡಿಸುವ ದಿನ.

3)ವಿಶ್ವ ಹೃದಯ ಪುನಶ್ಚೇತನ ದಿನ (World Restart a Heart Day) ಹೃದಯ ತುರ್ತು ಪರಿಸ್ಥಿತಿಗಳಲ್ಲಿ ಅಕಖ ಮುಂತಾದ ಪ್ರಥಮ ಚಿಕಿತ್ಸಾ ವಿಧಾನಗಳ ಮಹತ್ವವನ್ನು ತಿಳಿಸುವ ದಿನ.

4)ಜಾಗತಿಕ ಬೆಕ್ಕುಗಳ ದಿನ (Global Cat Day)? ಬೆಕ್ಕುಗಳ ಕಲ್ಯಾಣ ಮತ್ತು ರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವ ದಿನ.

5)ರಾಷ್ಟ್ರೀಯ ನಿಘಂಟು ದಿನ (National Dictionary Day) ಹೊಸ ಪದಗಳನ್ನು ಕಲಿಯಲು ಮತ್ತು ಭಾಷಾ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಪ್ರೇರೇಪಿಸುವ ದಿನ.

6)ವಿಶ್ವ ಅರಿವಳಿಕೆ ದಿನ (World Anaesthesia Day) ವೈದ್ಯಕೀಯ ಚಿಕಿತ್ಸೆಯಲ್ಲಿ ಅರಿವಳಿಕೆಯ ಮಹತ್ವವನ್ನು ನೆನಪಿಸುವ ದಿನ.

7)ಹೊಸ ಪದ ಕಲಿಯುವ ದಿನ (National Learn a Word Day) ಹೊಸ ಪದಗಳನ್ನು ಕಲಿತು ಭಾಷಾ ಜ್ಞಾನವನ್ನು ವೃದ್ಧಿಸಿಕೊಳ್ಳುವ ದಿನ.

ಸುಭಾಷಿತ

ಜನ ನಿಮ್ಮ ಗುರಿಯನ್ನು ನೋಡಿ ನಗಬೇಕು. ಇಲ್ಲದಿದ್ದರೆ ನಿಮ್ಮ ಗುರಿ ತೀರಾ ಸಣ್ಣದು ಎಂದು ಅರ್ಥಮಾಡಿಕೊಳ್ಳಿ.

-ಅಜೀಂ ಪ್ರೇಮ್‌ಜಿ

ಮುಂದುವೆರದ ಕಬ್ಬು ಬೆಳೆಗಾರರ ಅಹೋರಾತ್ರಿ ಧರಣಿ

ರಾಜ್ಯವ್ಯಾಪಿ ಬಂದ್‌ಗೆ ಅನ್ನದಾತರರ ಎಚ್ಚರಿಕೆ

ನೈಜ್ಯ ದೆಸೆ ನ್ಯೂಸ್

ಬೆಳಗಾವಿ/ಧಾರವಾಡ/ಬಾಗಲಕೋಟೆ: ಕಬ್ಬಿಗೆ ನ್ಯಾಯಯುತ ಬೆಲೆ ನಿಗದಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯದ ಕಬ್ಬು ಬೆಳೆಗಾರರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ನಡೆಯುತ್ತಿರುವ ಹೋರಾಟ 2 ನೇ ದಿನವೂ ಮುಂದುವರೆದಿದೆ.

ಪ್ರತಿ ಟನ್ ಕಬ್ಬಿಗೆ ಕನಿಷ್ಠ 5,500 ರೂ. ದರ ನಿಗದಿ, ಸಕ್ಕರೆಯ ಕನಿಷ್ಠ ಮಾರಾಟ ಬೆಲೆ ಹೆಚ್ಚಳ, ರಾಜ್ಯದಲ್ಲಿ ಉತ್ಪಾದನೆಯಾಗುವ ಸಂಪೂರ್ಣ ಎಥೆನಾಲ್ ಖರೀದಿ ಹಾಗೂ ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ತಕ್ಷಣವೇ ಜಾರಿಗೊಳಿಸಲು ಪಟ್ಟುಹಿಡಿದು ರಾಜ್ಯದ ಪ್ರಮುಖ ಹೆದ್ದಾರಿಗಳನ್ನು ಬಂದ್ ಮಾಡಿ ಅಹೋರಾತ್ರಿ ಧರಣಿ ಮುಂದುವರೆಸಿರುವ ಅನ್ನದಾತರು ಎರಡನೇ ದಿನವಾದ ಇಂದು ಕೂಡ ತಮ್ಮ ಹೋರಾಟ ಮುಂದುವರೆಸಿದರು. ಸರ್ಕಾರಗಳು ತಕ್ಷಣವೇ ಮಧ್ಯಪ್ರವೇಶಿಸಿ ಸೂಕ್ತ ದರ ಘೋಷಿಸದಿದ್ದರೆ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಿ ರಾಜ್ಯವ್ಯಾಪಿ ಬಂದ್‌ಗೆ ಕರೆ ನೀಡುವುದಾಗಿ ರೈತ ಸಂಘಟನೆಗಳು ಕಟುವಾಗಿ ಎಚ್ಚರಿಸಿವೆ.

ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಕಬ್ಬು ಬೆಳೆಗಾರರು ಅಹೋರಾತ್ರಿ ಧರಣಿ ಮುಂದುವರೆಸಿದ್ದಾರೆ. ಹುಕ್ಕೇರಿ ತಾಲೂಕಿನ ಹತ್ತರಗಿ ಟೋಲ್ ಪ್ಲಾಜಾ ಸೇರಿದಂತೆ ಹಿರೇಬಾಗೇವಾಡಿ ಮತ್ತು ಕೊಗ್ಗನೊಳ್ಳಿ ಚೆಕ್ ಪೋಸ್ಟ್‌ಗಳಲ್ಲಿ ರೈತರು ರಾಷ್ಟ್ರೀಯ ಹೆದ್ದಾರಿ-48 ತಡೆದು ಪ್ರತಿಭಟನೆ ನಡೆಸಿದ್ದಾರೆ. ರೈತರು ಹೆದ್ದಾರಿಯಲ್ಲೇ ರಾತ್ರಿ ಕಳೆದಿದ್ದು,ಇಂದು ಬೆಳಿಗ್ಗೆಯೂ ತಮ್ಮ ಹೋರಾಟ ಮುಂದುವರೆಸಿದ್ದಾರೆ. ರೈತ ಮುಖಂಡ ಚೂನಪ್ಪ ಪೂಜಾರಿ ನೇತೃತ್ವದಲ್ಲಿ ರೈತರ ಹೋರಾಟ ಮುಂದುವರೆಸಿರುವ ಹಿನ್ನೆಲೆಯಲ್ಲಿ ಹೆದ್ದಾರಿಯುದ್ದಕ್ಕೂ ಕಿಲೋಮೀಟರ್‌ಗಟ್ಟಲೆ ಸರಕು ವಾಹನಗಳು ನಿಂತುಬಿಟ್ಟಿವೆ.

ಬೆಳಗಾವಿಯಲ್ಲಿ ಹೆದ್ದಾರಿ ಸಂಪೂರ್ಣ ಸ್ತಬ:



ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 48ರ ಹತ್ತರಗಿ, ಕುಗನೊಳ್ಳಿ ಮತ್ತು ಹಿರೇಬಾಗೇವಾಡಿ ಟೋಲ್ ಗೇಟ್‌ಗಳ ಬಳಿ ಸಾವಿರಾರು ರೈತರು ಹೆದ್ದಾರಿಯಲ್ಲೇ ಮಲಗಿ ಅಹೋರಾತ್ರಿ ಧರಣಿ ನಡೆಸಿದ್ದು, ರಸ್ತೆ ಬದಿಯಲ್ಲೇ ಅಡುಗೆ ತಯಾರಿಸಿ ಊಟ ಮಾಡಿರುವ ರೈತರು, ಇಂದು ಕೂಡ ಹೆದ್ದಾರಿಯನ್ನು ಸಂಪೂರ್ಣ ಸ್ತಬ್ಧಗೊಳಿಸಿದ್ದಾರೆ.

ಹಿರೇಬಾಗೇವಾಡಿ ಬಳಿ ನೂರಾರು ಟ್ರಕ್‌ಗಳು ಮತ್ತು ಖಾಸಗಿ ವಾಹನಗಳು ಕಿಲೋಮೀಟರ್‌ಗಟ್ಟಲೆ ಸಾಲುಗಟ್ಟಿ ನಿಂತಿವೆ. ಹುಕ್ಕೇರಿ ತಾಲೂಕಿನ ಹತ್ತರಗಿ ಟೋಲ್ ಬಳಿ ಸಂಚರಿಸಲು ಯತ್ನಿಸಿದ ಗುಜರಾತ್ ಟ್ರಾವೆಲ್ಸ್ ಬಸ್ ಸೇರಿದಂತೆ ಹಲವು ವಾಹನಗಳನ್ನು ರೈತರು ತಡೆದು ವಾಪಸ್ ಕಳುಹಿಸಿದರು. ಇದೇ ವೇಳೆ ಹುಕ್ಕೇರಿ ಟೋಲ್ ನಾಕಾ ಬಳಿ ಕಬ್ಬಿಗೆ ಬೆಲೆ ಹೆಚ್ಚಳಕ್ಕೆ ಆಗ್ರಹಿಸಿ ಆಕ್ರೋಶಗೊಂಡ ಯುವ ರೈತನೊಬ್ಬ ಟೋಲ್ ಮೇಲಿಂದ ಜಿಗಿದು ಆತ್ಮಹತ್ಯೆಗೆ ಯತ್ನಿಸಿದ್ದು, ಪೊಲೀಸರು ಆತನನ್ನು ರಕ್ಷಿಸಿ ವಶಕ್ಕೆ ಪಡೆದಿದ್ದಾರೆ.

ಬಾಗಲಕೋಟೆಯಲ್ಲಿ ಉಗ್ರ ಹೋರಾಟ:

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಸೊರಗಾವಿ ಗ್ರಾಮದಲ್ಲೂ ಇದೇ ರೀತಿಯ ಪ್ರತಿಭಟನೆ ಮುಂದುವರೆದಿದ್ದು,ರೈತರು ದರ ನಿಗದಿ ಆಗುವವರೆಗೂ ಹೋರಾಟವನ್ನು ಕೈಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ. ಕೇಂದ್ರ ಸರ್ಕಾರಕ್ಕೆ ಬೇಡಿಕೆ ಈಡೇರಿಸಲು ಗಡುವು ನೀಡಿದ್ದು, ಇಲ್ಲವಾದರೆ ಉಗ್ರ ಹೋರಾಟ ನಡೆಸುವುದಾಗಿ ತಿಳಿಸಿದ್ದಾರೆ.

ಕಬ್ಬಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಗೆ ಆಗ್ರಹಿಸಿ ಕಬ್ಬು ಬೆಳೆಗಾರರು ಕರೆ ನೀಡಿರುವ ಹೆದ್ದಾರಿ ಬಂದ್ ಎರಡನೇ ದಿನವೂ ಮುಂದುವರೆದಿದೆ. ಧಾರವಾಡ ಹೊರವಲಯದ ಬೈಪಾಸ್ ರಸ್ತೆಯಲ್ಲಿ ರೈತರು ವಾಹನ ಸಂಚಾರವನ್ನು ಸಂಪೂರ್ಣವಾಗಿ ನಿಬಂಧಿಸಿ ಧರಣಿ ಕುಳಿತರು. ಸತತ 11 ಗಂಟೆಗಳಿಗೂ ಹೆಚ್ಚು ಕಾಲ ಸಂಚಾರ ಸ್ಥಗಿತಗೊಂಡಿದ್ದರಿಂದ ಪ್ರಯಾಣಿಕರು, ರೋಗಿಗಳು ಹಾಗೂ ಸರಕು ಸಾಗಣೆ ವಾಹನಗಳ ಚಾಲಕರು ರಸ್ತೆಯಲ್ಲೇ ಸಿಲುಕಿ ತೀವ್ರ ಪರದಾಟ ಅನುಭವಿಸಿದರು. ದೆಹಲಿಯಲ್ಲಿ ಕೇಂದ್ರ ಸರ್ಕಾರದೊಂದಿಗೆ ಅ.12ರಂದು ರೈತರ ಸಭೆ ನಡೆದಿತ್ತು. ಆದ-’ರೆ ಅಲ್ಲಿ ಯಾವುದೇ ಅಂತಿಮ ನಿರ್ಧಾರಕ್ಕೆ ಬರದಿರುವುದರಿಂದ ಸಭೆ ವಿಫಲವಾಗಿದೆ ಎಂದು ರೈತ ಸಂಘಟನೆಗಳು ಹೇರಿರುವ ರಾಷ್ಟ್ರೀಯ ಹೆದ್ದಾರಿ 4ರ ಬಂದ್ ಇಂದೂ ಮುಂದುವರೆದಿದೆ.

ಕೇಂದ್ರ ಸರ್ಕಾರ ತಮ್ಮ ಹೋರಾಟಕ್ಕೆ ಸ್ಪಂದಿಸಿಲ್ಲ ಎಂಬ ಕಾರಣಕ್ಕೆ ರೈತರು ಅಹೋರಾತ್ರಿ ಧರಣಿ ನಡೆಸಿದ್ದಾರೆ. ಧಾರವಾಡದ ಯರಿಕೊಪ್ಪ ಬಳಿಯ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿ ಅಹೋರಾತ್ರಿ ಧರಣಿ ಮುಂದುವರೆಸಿದ್ದಾರೆ. ಧಾರವಾಡ, ಅಳ್ನಾವರ, ಕಲಘಟಗಿ ಸೇರಿದಂತೆ ಅನೇಕ ತಾಲೂಕುಗಳ ಕಬ್ಬು ಬೆಳೆಗಾರರು ಈ ಹೋರಾಟದಲ್ಲಿ ಭಾಗವಹಿಸಿದ್ದಾರೆ.

ತಾಲೂಕಿನ ಯರಿಕೊಪ್ಪ ಗ್ರಾಮದ ಬಳಿ ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 4ನ್ನು ತಡೆದು ರೈತರು ಹೋರಾಟ ಮಾಡಿದರು. ಬಂದ್ ಸಂಪೂರ್ಣವಾಗಿ ಯಶಸ್ವಿಯಾಗಿತ್ತು. ಆದರೆ ತಮ್ಮ ಬೇಡಿಕೆಗಳಿಗೆ ಕೇಂದ್ರ ಸರ್ಕಾರ ಸ್ಪಂದಿಸಿಲ್ಲ ಎಂದು ಆಕ್ರೋಶಗೊಂಡಿರುವ ರೈತರು ಹೋರಾಟವನ್ನು ಮುಂದುವರೆಸಿದ್ದಾರೆ.

ಈ ಮಧ್ಯೆ ಧಾರವಾಡ ತಾಲೂಕಿನ ಯರಿಕೊಪ್ಪ ಬಳಿ ನಡೆಯುತ್ತಿದ್ದ ಬಂದ್ ಸ್ಥಳಕ್ಕೆ ಆಗಮಿಸಿದ ರೈತ ಮುಖಂಡ ಚೂನಪ್ಪ ಪೂಜಾರಿ ಕೇಂದ್ರ ಸರ್ಕಾರಕ್ಕೆ ಬೇಡಿಕೆ ಈಡೇರಿಗಾಗಿ ಗಡುವು ನೀಡಿದ್ದರು.ಪ್ರತಿಭಟನೆ ನಡೆಸುತ್ತಿರುವ ರೈತರು ನಿನ್ನೆ ಹೆದ್ದಾರಿ ಪಕ್ಕದಲ್ಲಿ ಟೆಂಟ್ ಹಾಕಿದ್ದರು. ಆ ಟೆಂಟ್‌ನ್ನು ಇಂದು ಹೆದ್ದಾರಿಗೆ ಶಿಫ್ಟ್ ಮಾಡಿದ್ದಾರೆ. ರೈತರ ಈ ನಿರ್ಧಾರಕ್ಕೆ ಪೊಲೀಸರ ಆಕ್ಷೇಪಿಸಿದ್ದು ಹೆದ್ದಾರಿ ಮೇಲೆ ಟೆಂಟ್ ಹಾಕುವಂತಿಲ್ಲ ಎಂದು ಎಸ್‌ಪಿ ಗುಂಜನ್ ಆರ್ಯ ಎಚ್ಚರಿಕೆ ನೀಡಿದರು. ಈ ವೇಳೆ ಮಾತಿನ ಚಕಮಕಿ ನಡೆದಿದೆ. ಇತ್ತ, ಬಿಸಿಲು ಹೆಚ್ಚಾಗಿದ್ದಕ್ಕೆ ಟೆಂಟ್ ಶಿಫ್ಟ್ ಮಾಡಿದ್ದೇವೆ ಎಂದು ರೈತರು ಸ್ಪಷ್ಟನೆ ನೀಡಿದ್ದಾರೆ.

ರೈತರ ಪ್ರಮುಖ ಬೇಡಿಕೆಗಳು:

1. ಪ್ರತಿ ಟನ್ ಕಬ್ಬಿಗೆ ಕನಿಷ್ಠ 5,500 ರೂ. ದರ ನಿಗದಿಪಡಿಸಬೇಕು.
2. ಸಕ್ಕರೆಯ ಕನಿಷ್ಠ ಮಾರಾಟ ಬೆಲೆಯನ್ನು ಏರಿಕೆ ಮಾಡಬೇಕು.
3. ರಾಜ್ಯದಲ್ಲಿ ಉತ್ಪಾದನೆಯಾಗುವ ಎಥೆನಾಲ್ ಅನ್ನು ಕೇಂದ್ರ ಸರ್ಕಾರವೇ ಸಂಪೂರ್ಣವಾಗಿ ಖರೀದಿಸಬೇಕು.
4. ಸ್ವಾಮಿನಾಥನ್ ಆಯೋಗದ ವರದಿ ಮತ್ತು ಶಿಫಾರಸುಗಳನ್ನು ಸಂಪೂರ್ಣವಾಗಿ ಜಾ-ರಿಗೊಳಿಸಬೇಕು.

ವಾರಬಂಧಿ ಪದ್ಧತಿಯನ್ನು ಕೈಬಿಟ್ಟು ನಿರಂತರ ಕಾಲುವೆಗೆ ನೀರು ಪೂರೈಸಲು ಬಯ್ಯಾಪುರು ಆಗ್ರಹ

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಬೆಂಗಳೂರಿನ ವಿಕಾಸಸೌಧದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ 2026?27ನೇ ಸಾಲಿನ ಮುಂಗಾರು ಹಂಗಾಮಿನ ಉಳಿದ ಅವಧಿ ಹಾಗೂ ಹಿಂಗಾರು ಹಂಗಾಮಿನ ನೀರಾವರಿ ಸಲಹಾ ಸಮಿತಿ ಸಭೆಯು ಕರ್ನಾಟಕ ಸರ್ಕಾರದ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು ಮತ್ತು ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರಾದ ವಿಜಯಾನಂದ ಕಾಶಪ್ಪನವರ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಈ ವೇಳೆ ಮಾತನಾಡಿದ ವಿಧಾನ ಪರಿಷತ್ ಸದಸ್ಯರು ಹಾಗೂ ರಾಜ್ಯ ಅಪೇಕ್ಷ ಬ್ಯಾಂಕಿನ ಉಪಾಧ್ಯಕ್ಷರು ಶರಣಗೌಡ ಪಾಟೀಲ್ ರೈತರ ಕೃಷಿ ಚಟುವಟಿಕೆಗಳಿಗೆ ಯಾವುದೇ ತೊಂದರೆಯಾಗದಂತೆ ವಾರಾಬಂಧಿ ಪದ್ಧತಿಯನ್ನು ಕೈಬಿಟ್ಟು, ಕಾಲುವೆಗಳಿಗೆ ನಿರಂತರವಾಗಿ ನೀರು ಹರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.ಸ್ಥಳೀಯ ರೈತರು ಎದುರಿಸುತ್ತಿರುವ ನೀರಾವರಿ ಸಮಸ್ಯೆಗಳನ್ನು



ಸಭೆಯ ಅಧ್ಯಕ್ಷರ ಗಮನಕ್ಕೆ ತಂದ ಶಾಸಕರು, ರೈತರ ಹಿತಾಸಕ್ತಿಯನ್ನು ಕಾಪಾಡುವುದು ಹಾಗೂ ಕೃಷಿ ಚಟುವಟಿ-ಕೆಗಳಿಗೆ ಸಮರ್ಪಕವಾಗಿ ನೀರು ಒದಗಿಸುವುದು ಅಗತ್ಯವೆಂದು ತಿಳಿಸಿದರು. ಈ ನಿಟ್ಟಿನಲ್ಲಿ ನೀರಿನ ಸಮರ್ಪಕ ನಿರ್ವಹಣೆಗೆ ಹೆಚ್ಚಿನ ಆದ್ಯತೆ ನೀಡಿ, ರೈತ-ರಿಗೆ ಅನುಕೂಲವಾಗುವ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು ಎಂದು ಅಧಿಕಾ-ರಿಗಳಿಗೆ ಸೂಚಿಸಿದರು. ಅಲ್ಲದೆ, ಸಭೆಯಲ್ಲಿ ಉಪಸ್ಥಿತರಿದ್ದ ಶಾಸಕರೊಂದಿಗೆ ಒಗ್ಗಟ್ಟಿನಿಂದ ವಾರಾಬಂಧಿ ಪದ್ಧತಿಯನ್ನು ಕೈಬಿಟ್ಟು ನಿರಂತರ ನೀರು ಪೂರೈಸುವಂತೆ ಸಲಹಾ ಸಮಿತಿ ಅಧ್ಯಕ್ಷರಿಗೆ ಮನವಿ ಮಾಡಿದರು. ಈ ಸಂದರ್ಭದಲ್ಲಿ. ಸಚಿವರಾದ ಡಾ. ಎಂ.ಬಿ. ಪಾಟೀಲ, ಡಾ. ಶರಣಪ್ರಕಾಶ ಪಾಟೀಲ, ಡಾ. ಅಜಯ್ ಸಿಂಗ್, ಸಂಸದ ಜಿ. ಕುಮಾರ್ ನಾಯಕ, ಶಾಸಕರು, ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು

ಮಹಿಳಾ ಕಬಡ್ಡಿ ಪಂದ್ಯಾವಳಿಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆಯಾದ ಸರ್ಕಾರಿ ಆದರ್ಶ ವಿದ್ಯಾಲಯ, ಅರಕೇರ ತಂಡ!

ನೈಜ್ಯ ದೆಸೆ ನ್ಯೂಸ್

ಅರಕೇರ: ಸರ್ಕಾರಿ ಆದರ್ಶ ವಿದ್ಯಾಲಯ, ಅರಕೇರ ಶಾಲೆಯ ಬಾಲಕಿಯರ ಕಬಡ್ಡಿ ತಂಡವು ಕಲಬುರಗಿ ವಿಭಾಗಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟದ ಪಂದ್ಯಾವಳಿಗೆ ಆಯ್ಕೆಯಾಗಿದೆ.

ಪ್ರಾಥಮಿಕ ಮತ್ತು ಪ್ರೌಢಶಾಲಾ ವಿಭಾಗದ ಬಾಲಕ ಹಾಗೂ ಬಾಲಕಿಯರ ಕಲಬುರಗಿ ವಿಭಾಗಮಟ್ಟದ ಕ್ರೀಡಾಕೂಟವು ಬಳ್ಳಾರಿಯ ಕಂಟೋನ್ಮೆಂಟ್‌ನ ನಂದಿ ಪ್ರೌಢಶಾಲೆಯಲ್ಲಿ ನಡೆಯಿತು. ಈ ಪಂದ್ಯಾವಳಿಯಲ್ಲಿ ಸರ್ಕಾರಿ ಆದ-’ರ್ಶ ವಿದ್ಯಾಲಯ, ಅರಕೇರ ಶಾಲೆಯ ಬಾಲಕಿಯರ ಕಬಡ್ಡಿ ತಂಡವು ಅತ್ಯುತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನ ಗಳಿಸುವ ಮೂಲಕ ರಾಜ್ಯಮಟ್ಟಕ್ಕೆ ಆಯ್ಕೆಯಾಗುವಲ್ಲಿ ಯಶಸ್ವಿಯಾಗಿದೆ.

ವಿದ್ಯಾರ್ಥಿನಿಯರ ಈ ಸಾಧನೆಗೆ



ಶಾಲೆಯ ಪ್ರಾಂಶುಪಾಲರು ಹಾಗೂ ಸಮಸ್ತ ಶಿಕ್ಷಕ ವೃಂದದವರು ಹರ್ಷ ವ್ಯಕ್ತಪಡಿಸಿ, ವಿದ್ಯಾರ್ಥಿನಿಯರಿಗೆ ಅಭಿನಂದನೆ ಸಲ್ಲಿಸಿದ್ದಾರೆ. ಮುಂದಿನ ರಾಜ್ಯಮಟ್ಟದ ಪಂದ್ಯಾವಳಿಯಲ್ಲಿಯೂ ಉತ್ತಮ ಪ್ರದರ್ಶನ ನೀಡಿ ಶಾಲೆ ಹಾಗೂ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಲಿ ಎಂದು ಶುಭ ಹಾರೈಸಿದ್ದಾರೆ.

ಈ ಪಂದ್ಯಾವಳಿಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಾದ ಶಂಕರಗೌಡ ಪಾಟೀಲ್, ಗಲಗ ಮತ್ತು ಪಂಪನಗೌಡ, ಗಲಗ ಅವರು ವಿದ್ಯಾರ್ಥಿನಿಯರೊಂದಿಗೆ ಹಾಜರಿದ್ದು, ತಂಡಕ್ಕೆ ಮಾರ್ಗದರ್ಶನ ಹಾಗೂ ಪ್ರೋತ್ಸಾಹ ನೀಡಿದರು.

ವಿದ್ಯಾರ್ಥಿನಿಯರ ಈ ಸಾಧನೆಯು ಶಾಲೆಯ ಕ್ರೀಡಾ ಚಟುವಟಿ-ಕೆಗಳಿಗೆ ಮತ್ತಷ್ಟು ಉತ್ತೇಜನ ನೀಡಿದ್ದು, ಶಾಲೆಯ ಶಿಕ್ಷಕರು, ಪೋಷಕರು ಹಾಗೂ ಗ್ರಾಮಸ್ಥರಲ್ಲಿ ಸಂತಸ ಮೂಡಿಸಿದೆ. ರಾಜ್ಯಮಟ್ಟಕ್ಕೆ ಆಯ್ಕೆಯಾದ ಬಾಲಕಿ-ಯರ ಕಬಡ್ಡಿ ತಂಡಕ್ಕೆ ಹೃತ್ಪೂರ್ವಕ ಅಭಿನಂದನೆಗಳು ಹಾಗೂ ಮುಂದಿನ ಸ್ಪರ್ಧೆಗೆ ಶುಭಾಶಯಗಳು! ತಿಳಿಸಿದರು

ಅಂಗನವಾಡಿ ಕೇಂದ್ರದಲ್ಲಿ ತಾಯಿ ಮಗುವಿನ ಸುರಕ್ಷತೆ ಕುರಿತು ಆರೋಗ್ಯ ಶಿಕ್ಷಣ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಬಾಲ್ಯದಿಂದಲೆ ಹೆಣ್ಣು ಗಂಡು ಎಂಬ ಬೇಧ ಮಾಡದೆ ಮಕ್ಕಳಿಗೆ ಪೌಷ್ಟಿಕಾಹಾರ, ವೈಯಕ್ತಿಕ ಶುಚಿತ್ವ, ನಿಯಮಿತವಾಗಿ ಲಸಿಕೆಗಳನ್ನು ಒದಗಿಸುವ ಭವಿಷ್ಯದಲ್ಲಿ ಸದೃಡ ಸಮಾಜ ನಿರ್ಮಿಸಲು ಎಲ್ಲರೂ ಮುಂದೆ ಬರಬೇಕು ಎಂದು ಜಿಲ್ಲಾ ಆರೋಗ್ಯ ಮೇಲ್ವಿಚಾರಣಾಧಿಕಾರಿ ಪುಂಡಲಿಕ ಗಂಜಿ ತಿಳಿಸಿದರು.

ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆಶ್ರಯದಲ್ಲಿ ರಾಯಚೂರು ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಸಿಯಾತಲಾಬ್ ವ್ಯಾಪ್ತಿಯ ಅಂಗನವಾಡಿ ಕೇಂದ್ರದಲ್ಲಿ ಮಕ್ಕಳಿಗೆ ಬಾಲ್ಯದಲ್ಲಿ ಕಾಡುವ ಮಾರಕ ರೋಗಗಳ ವಿರುದ್ಧ ಹಾಕುವ ಲಸಿಕಾ ಅಧಿವೇಶನದ ನಂತರ ಪೌಷ್ಟಿಕಾಹಾರ ಮತ್ತು ನೈರ್ಮಲ್ಯ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ



ಗರ್ಭಿಣಿಯರು, ಹಾಲುಣಿಸುವ ತಾಯಂದಿರು, ಕಿಶೋರಿಯರು ಭಾಗವಹಿಸಿದ್ದರು. ಆಹಾರ ಸೇವನೆಗೆ ಮೊದಲು ಕೈಗಳನ್ನು ಸ್ವಚ್ಛವಾಗಿ ತೊಳೆದು ಕೊಳ್ಳುವ, ಪೌಷ್ಟಿಕ ಆಹಾರ, ತಾಜಾ ಹಣ್ಣು, ತರಕಾರಿ ಸೇವನೆ, ಲಸಿಕಾ ಕಾರ್ಯಕ್ರಮ, ಕುಟುಂಬ ಕಲ್ಯಾಣ ಯೋಜನೆಗಳು, ಸಾಂಕ್ರಾಮಿಕ, ಅಸಾಂಕ್ರಾಮಿಕ ರೋಗಗಳ ನಿಯಂತ್ರಣ ಮತ್ತು ಚಿಕಿತ್ಸೆ, ಮಕ್ಕಳಲ್ಲಿ ಕಂಡು ಬರುವ ಅತಿಸಾರ ಭೇದಿ, ನ್ಯುಮೋನಿಯಾ, ಬಾಲ್ಯ ಕ್ಷಯ, ಡಿಪ್ತಿರಿಯ, ಹಾಗು ಮಲೇರಿಯ, ಡೆಂಗ್ಯೂ, ಚಿಕುನ್ ಗುನ್ಯಾ, ಆನೆಕಾಲು ರೋಗವಾಹಕ ಸೊಳ್ಳೆಗಳ ನಿಯಂತ್ರಣ, ವಾಂತಿ ಬೇಧಿ, ಕಾಲರಾ ರೋಗ ಹರಡಲು ಕಾರಣವಾಗಿರುವ ಅಶುದ್ಧ ಕುಡಿಯುವ ನೀರು ಮತ್ತು ಕಲುಷಿತ ಆಹಾರ ಸೇವನೆ ಬಗ್ಗೆ ಜಾಗೃತವಾಗಿರಲು ಮಾಹಿತಿ ನೀಡಲಾಯಿತು. ಮುಂದುವರೆದು ಅಂಗನವಾಡಿ ಕೇಂದ್ರ ಗಳಲ್ಲಿ ಸಿಗುವ ಸೇವೆಗಳಾದ ಪ್ರಧಾನ ಮಂತ್ರಿ ಮಾತೃತ್ವ ಯೋಜನೆ, ಭಾಗ್ಯ ಲಕ್ಷ್ಮೀ ಯೋಜನೆ, ಮಕ್ಕಳಿಗೆ ನೀಡುವ ಪೌಷ್ಟಿಕ ಆಹಾರ ಕುರಿತು ಮಾಹಿತಿ ನೀಡಿದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ನಾಗರಾಜ ಜಗತಾಪ್ ಮಾತನಾಡಿ, ಕುಟುಂಬ ಕಲ್ಯಾಣ ಯೋಜನೆಗಳ ಶಾಶ್ವತ ಹಾಗೂ ತಾತ್ಕಾಲಿಕ ವಿಧಾನಗಳ ಕುರಿತು ಮತ್ತು ಮಕ್ಕಳ ನಡುವೆ 03 ವರ್ಷಗಳ ಅಂತರ ಕಾಯ್ದುಕೊಳ್ಳಲು ಮತ್ತು ಆರೋಗ್ಯವಂತ ಮಕ್ಕಳ ಪೋಷಣೆಗೆ ಸಹಕಾರಿ. ಅಲ್ಲದೆ ನಿಯಮಿತವಾಗಿ ಆರೋಗ್ಯ ತಪಾಸಣೆ, ಮಕ್ಕಳಿಗೆ ಲಸಿಕೆ ಹಾಕಿಸಲು ಹಾಗೂ ಗರ್ಭಿಣಿ ಮಹಿಳೆಯರು ಬೇಗ ನೋಂದಣಿ ಮಾಡಿಸಿ ನಿಯಮಿತವಾಗಿ ಲಸಿಕೆ ಮತ್ತು ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಲು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ರೇಣುಕಾ, ಸ್ವಯಂ ಸೇವಾ ಸಂಸ್ಥೆಯ ಸದಸ್ಯರಾದ ಓಂಕಾರ, ಅಂಗನವಾಡಿ ಕಾರ್ಯಕರ್ತೆ ಸರಸ್ವತಿ ಆಶಾ ಕಾರ್ಯಕರ್ತೆ ಈರಮ್ಮ ಮತ್ತು ಅರುಣಾ ಸೇರಿದಂತೆ ತಾಯಂದಿರು. ಉಪಸ್ಥಿತರಿದ್ದರು.

ಸಾಹಿತ್ಯ ಸಿಂಚನ

ಕನಸುಗಳ ದಾರಿಯಲ್ಲಿ

ಕನಸುಗಳ ದಾರಿಯಲ್ಲಿ ಹೆಜ್ಜೆಯಿಡುವೆನು,
ಹೊಸ ಭರವಸೆಯ ಬೆಳಕನ್ನು ಹುಡುಕುವೆನು.
ಮನದೊಳಗೆ ಸಾವಿರ ಆಸೆಗಳು ಮೂಡಿವೆ,
ನಾಳೆಯ ಬದುಕಿಗೆ ಹೊಸ ಬಣ್ಣ ತುಂಬಿವೆ.

ಕಲ್ಲು ಮುಳ್ಳಿನ ಹಾದಿಯೇ ಎದುರಾದರೂ,
ಎದೆಗುಂದದೆ ಸಾಗುವೆ ಗುರಿಯ ಕಂಡರೂ.
ಸೋಲುಗಳು ಬಂದರೂ ಪಾಠವ ಕಲಿಯುವೆ,
ಗೆಲುವಿನ ಶಿಖರವ ತಲುಪುವೆನೆಂದು ನಂಬುವೆ.

ಕತ್ತಲೆಯ ನಡುವೆ ದೀಪವಾಗಿ ಬೆಳಗುವೆ,
ಕಣ್ಣೀರ ಹನಿಗಳಲ್ಲೂ ನಗುವನ್ನು ಅರಳಿಸುವೆ.
ಜಗದ ಮಾತುಗಳಿಗೆ ಕಿವಿಗೊಡದೆ,
ನನ್ನ ಕನಸುಗಳ ಬೆನ್ನಟ್ಟಿ ಸಾಗುವೆ.

ದೂರದ ತಾರೆಗಳೇ ನನ್ನ ಗುರಿಯಾದರೂ,
ಧೈರ್ಯದ ರೆಕ್ಕೆಗಳಿವೆ ನನ್ನ ಬಳಿಯಾದರೂ.
ಪ್ರತಿ ಹೆಜ್ಜೆಯಲ್ಲೂ ಹೊಸ ಪಾಠ ಕಲಿತು,
ಪ್ರತಿ ದಿನವೂ ಮುನ್ನಡೆಯುವೆ ಕನಸನ್ನು ಹೊತ್ತು.

ಒಂದು ದಿನ ನನ್ನ ಕನಸು ನನಸಾಗುವುದು,
ನನ್ನ ಪರಿಶ್ರಮಕ್ಕೆ ಫಲವೂ ದೊರಕುವುದು.
ಕನಸುಗಳ ದಾರಿಯಲ್ಲಿ ನಿಲ್ಲದ ಪಯಣ,
ನನ್ನ ಬದುಕಿಗೊಂದು ಸುಂದರ ನವಚೈತನ್ಯ!

ಹಾಲಾಪೂರ:ಮೂರು ಕುಡಿಯುವ ನೀರಿನ ಟ್ಯಾಂಕ್ ಇದ್ದು, ಮೂರು ಹನಿ ನೀರು ಇಲ್ಲ,ಇದು ಧೌರ್ಭಾಗ್ಯ

ನೈಜ್ಯ ದೆಸೆ ನ್ಯೂಸ್

ಹಾಲಾಪೂರ: ಗ್ರಾಮದಲ್ಲಿ ಮೂರು ಕುಡಿಯುವ ನೀರಿನ ಟ್ಯಾಂಕರ್ ಇವೆ,ಅವು ಸುಣ್ಣಬಣ್ಣಗಳಿಂದ ಮಧುವಣಗಿತ್ತೆಯಂತೆ ಅಲಂಕೃತದಿಂದ ಎದ್ದು ಕಾಣುತ್ತವೆ, ಆದರೆ ದುರ್ದೈವ ಮೂರು ಟ್ಯಾಂಕರ್ ನಿಂದ ಮೂರು ಹನಿ ನೀರು ಬರುತ್ತೀಲ್ಲ ಉಪಯೋಗ ಸಹ ಇಲ್ಲ, ಹಾಲಾಪೂರಕ್ಕೆ ಎಂಟ್ರನ್ಸ್ ಬರಬೇಕದಾರೆ ಗೊಪುರಕಳಸ ತರ ಎದ್ದು ಕಾಣುತ್ತೇವೆ,ಬೇಸಿಗೆಯಲ್ಲಿ ನೀರಿನ ಹಾಹಾಕಾರ ಹೇಳತಿರದು.




ಇದು ನಿಜಕ್ಕೂ ಸ್ಥಳಿಯ ಆಡಳಿತದ ವೈಫಲ್ಯ ಜನರ ದೌರ್ಭಾಗ್ಯ , ಇವಾಗ ಮತ್ತೆ ಕೇಂದ್ರ ಸರಕಾರದ ಜಲಧಾರೆ ಯೋಜನೆ ಕಾಮಗಾರಿ ನಡೆದಿದೆ ಅದರಿಂದ ಊರಿನ ಚೆನ್ನಾಗಿರುವ ಸಿಸಿ ರಸ್ತೆ, ಮುಖ್ಯರಸ್ತೆ ಪೈಪ್ ಲೈನ್ ಮಾಡುವ ಸಲುವಾಗಿ ಆಳುಮಾಡಿ ಬೇಕಾಬಿಟ್ಟಿ ಪೈಪ್ ಲೈನ್ ಮಾಡಿ ಹೋಗುತ್ತಾರೆ, ಇದರಿಂದ ಒಳ್ಳೆಯ ಸಿಸಿ ರಸ್ತೆ ಹದೆಗೆಟ್ಟಿವೆ, ಹೀಗೆ ನಾಲ್ಕು ವರ್ಷ ಹಿಂದೆ ಹಾಲಾಪೂರಕ್ಕೆ ಅಷ್ಟೇ 94 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಜೆಜೆ-ಎಮ್ ಕುಡಿಯುವ ನೀರು ಯೋಜನೆ ಕೆಲಸ ಅಂತ ಹೇಳಿ ಊರೊಳಗೆ ಇರುವ ಸಿಸಿ ರಸ್ತೆ ಎಲ್ಲವೂ ಹಾಳು, ಮನೆಮನೆಗೆ ನಳ ಕುಡಿಸಿದರೂ ನೀರು ಮಾತ್ರ ಬರಲೆಇಲ್ಲ, ಇದಕ್ಕೆಲ್ಲ ಸ್ಥಳೀಯ ಗ್ರಾಮ, ತಾಲ್ಲೂಕು , ಜಿಲ್ಲಾ ಪಂಚಾಯತ ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳ ವೈಫಲ್ಯತೆ ಎಂದು ಸಾರ್ವಜನಿಕರ ಆಕ್ರೋಶವಾಗಿದೆ.

ಮಾಜಿ ಪುರಸಭೆ ಸದಸ್ಯ ಎಂ.ಸಿ. ಮಾಯಪ್ಪ ನಿಧನ

ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ಪಟ್ಟಣದ 15ನೇ ವಾರ್ಡಿನ ಛಲುವಾದಿ ಸಮಾಜದ ಹಿರಿಯ ಮುಖಂಡ ಮತ್ತು ಪುರಸಭೆ ಮಾಜಿ ಸದಸ್ಯ ಎಂ.ಸಿ.ಮಾಯಪ್ಪ(78) ಅನಾರೋಗ್ಯದಿಂದ ಬುಧವಾರ ನಿಧನರಾದರು.



ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಶವ ಸಂಸ್ಕಾರ ಇಲ್ಲಿನ ಸಣಾಪುರ ರಸ್ತೆಯ ರುದ್ರಭೂಮಿಯಲ್ಲಿ ಗುರುವಾರ ನಡೆಯಲಿದೆ. ಕಂಪ್ಲಿ ಪುರಸಭೆಯ ಮಾಜಿ ಸದಸ್ಯರಾಗಿ ಸಾರ್ವಜನಿಕ ಸೇವೆ ಸಲ್ಲಿಸಿದ್ದರು. ಚಲುವಾದಿ ಮಹಾಸಭಾದ ರಾಜ್ಯ ಮುಖ್ಯಸ್ಥರಾಗಿಯೂ ಜವಾಬ್ದಾರಿ ನಿಭಾಯಿಸಿದ್ದ ಇವರು, ವಿವಿಧ ಸಾಮಾಜಿಕ, ಧಾರ್ಮಿಕ ಮತ್ತು ಪ್ರಗತಿಪರ ಸಂಘ-ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಸಮಾಜದ ಶ್ರೇಯೋಭಿವೃದ್ಧಿಗಾಗಿ ಮತ್ತು ಶೋಷಿತ ವರ್ಗಗಳ ಹಕ್ಕುಗಳಿಗಾಗಿ ಅವರು ನಿರಂತರವಾಗಿ ಶ್ರಮಿಸಿದ್ದರು. ಕರ್ನಾಟಕ ರಾಜ್ಯ ಚಲುವಾದಿ ಮಹಾಸಭಾದ ಪದಾಧಿಕಾರಿಗಳು ಹಾಗೂ ಸಮಾಜದ ಪ್ರಮುಖರು, ಗಣ್ಯರು ತೀವ್ರ ಸಂತಾಪ ಸೂಚಿಸಿ, ಅವರ ಆತ್ಮಕ್ಕೆ ಶಾಂತಿ ಕೋರಿದರು.

ಹಾನಗಲ್ ನ ಅನಾಥ ವೃದ್ದೆ ಶ್ರೀ ದೇವಿ ಪಾಟೀಲ್ ಗೆ ಆಶ್ರಯ ನೀಡಿದ ಸಿಂಧನೂರಿನ ಕರುಣೆಯ ಕಾರುಣ್ಯಾಶ್ರಮ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಹಾವೇರಿ ಜಿಲ್ಲೆಯ ಹಾನಗಲ್ ಪಟ್ಟಣದಲ್ಲಿ ಸುಮಾರು ವರ್ಷಗಳಿಂದ ವಾಸವಾಗಿದ್ದ ಯಾರು ಇಲ್ಲದ ಅನಾಥ ವೃದ್ದೆ ಶ್ರೀದೇವಿ ಪಾಟೀಲ್ ಗಂ. ದಿ. ಶ್ರೀಪಾದ ಪಾಟೀಲ್ ವಯಸ್ಸು-73 ಇವರನ್ನು ಕಾರುಣ್ಯ ಸಂಸ್ಥೆಯ ಹಾವೇರಿ ಜಿಲ್ಲಾ ಗೌರವಾಧ್ಯಕ್ಷರು ಹಾಗೂ ತಿಳುವಳ್ಳಿಯ ಕೋಡಿಹಳ್ಳಿ ಕಲಾ ಸೇವಾ ಸಂಸ್ಥೆಯ ಸಂಸ್ಥಾಪಕರಾದ ಪುಟ್ಟರಾಜ ಜಿ.ಕೋಡಿಹಳ್ಳಿ ಅವರ ನಿರ್ದೇಶನದಂತೆ ಸಿಂಧನೂರಿನ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಆಶ್ರಯ ನೀಡಲಾಯಿತು.



ಈ ಸಮಯದಲ್ಲಿ ಆಶ್ರಮದ ಸಂಸ್ಥಾಪಕರಾದ ವೇದಮೂರ್ತಿ ಅಮರಯ್ಯ ಸ್ವಾಮಿ ಹಿರೇಮಠ ಹರೇಟನೂರು ಅವರು ಮಾತನಾಡಿ ಸಮಾಜದಲ್ಲಿನ ಅನಾಥರ ನೊಂದವರ ಬದುಕಿಗಾಗಿ ಈ ಸಂಸ್ಥೆಯನ್ನು ಹುಟ್ಟು ಹಾಕಲಾಗಿದೆ. ನಮ್ಮ ಜೋಳಿಗೆಗೆ ಸಹಾಯ ಸಹಕಾರ ಮಾಡುವ ದಾನಿಗಳೇ ಈ ಕಾರುಣ್ಯ ಕುಟುಂಬದ ಯಜಮಾನರುಗಳು ನಾಡಿನಲ್ಲಿ ಅನಾಥ ಪ್ರಜ್ಞೆಯನ್ನು ಅಳಿಸಿ ಹಾಕುವ ಸಂಕಲ್ಪವನ್ನು ನಮ್ಮ ಕಾರುಣ್ಯ ಸಂಸ್ಥೆ ಹೊಂದಿದೆ.

ಸಿಂಧನೂರಿನ ಅನೇಕ ರಾಜ-ಕೀಯ ಧುರೀಣರ ಮತ್ತು ಸರ್ವ ಸಮಾಜದ ಗುರು ಹಿರಿಯರುಗಳ ಮಾರ್ಗದರ್ಶನವೇ ನಮ್ಮ ಸೇವೆಗೆ ಸ್ಫೂರ್ತಿ ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ತಿಳುವಳ್ಳಿಯ ಪುಟ್ಟರಾಜ ಕೋಡಿಹಳ್ಳಿ ಅವರು ಹಾವೇರಿ ಜಿಲ್ಲೆಯ ಗೌರವಾಧ್ಯಕ್ಷರಾಗಿ ಈ ಕಾರುಣ್ಯ ಆಶ್ರಮದ ಕರುಣೆಯ ಮೂರ್ತಿಗಳಾಗಿದ್ದಾರೆ. ಎಷ್ಟೇ ದೂರವಿದ್ದರೂ ಸಹ ಕಾರುಣ್ಯ ಕುಟುಂಬದ ಬಹುದೊಡ್ಡ ಜವಾಬ್ದಾ-ರಿಯನ್ನು ತಿಳುವಳ್ಳಿಯ ಕೋಡಿಹಳ್ಳಿ ಕುಟುಂಬ ನಿರ್ವಹಿಸುತ್ತಿದೆ. ಇಂದು ಆಶ್ರಯ ಕಲ್ಪಿಸಿರುವ ಶ್ರೀದೇವಿ ಪಾಟೀಲ್ ಅವರ ಸೇವೆಯೇ ನಮಗೆ ಸೌಭಾಗ್ಯವಾಗಿದೆ. ಮತ್ತು ನಾಡಿನ ಹಾನಗಲ್ ಶ್ರೀ ಕುಮಾರೇಶ್ವರ ಆಶೀರ್ವಾದವೇ ನಮ್ಮ ಸೇವೆಗೆ ಬಹುದೊಡ್ಡಶಕ್ತಿ ಎಂದು ಮಾತನಾಡಿ ಸಮಸ್ತ ಮಹಾದಾನಿಗಳಿಗೆ ಧನ್ಯವಾದಗಳನ್ನು ತಿಳಿಸಿದರು.

ಈ ಸಮಯದಲ್ಲಿ ಅಡಿವೆಣ್ಣ ತಂ. ಯಲ್ಲಪ್ಪ ಅಡಿವೆಣ್ಣನವರು ಹಾನಗಲ್. ಗೋವಿಂದಪ್ಪ ಗೆಜ್ಜೆ ಹಳ್ಳಿ. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ. ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ.ಮರಿಯಪ್ಪ. ವಿದ್ಯಾಶ್ರೀ.ಜ್ಯೋತಿ. ಶಂಕ್ರಮ್ಮ. ಶರಣು ಸ್ವಾಮಿ. ಬಸವ ಸ್ವಾಮಿ. ಹಾಗೂ ಅನೇಕರು ಉಪಸ್ಥಿತರಿದ್ದರು.

ದೇವಾಪುರ ಕ್ರಾಸ್-ದೇವತ್ಕಲ್ ರಸ್ತೆ ಮರು ಡಾಂಬರೀಕರಣಕ್ಕೆ ಆಗ್ರಹ: ಸುರಪುರದಲ್ಲಿ ಮಾದಿಗ ದಂಡೋರ (MRPS) ನಿಂದ ಬೃಹತ್ ಪ್ರತಿಭಟನೆ, ಮನವಿ ಸಲ್ಲಿಕೆ

ನೈಜ್ಯ ದೆಸೆ ನ್ಯೂಸ್

ಸುರಪುರ: ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ದೇವಾಪುರ ಕ್ರಾಸ್‌ನಿಂದ ದೇವತ್ಕಲ್ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾ-ರಿಯಲ್ಲಿ ಪೈಪ್‌ಲೈನ್ ಅಳವಡಿಕೆಗಾಗಿ ರಸ್ತೆಯನ್ನು ಅಗೆದು ಹಾಗೆಯೇ ಬಿಡಲಾಗಿದ್ದು, ರಸ್ತೆಯು ಸಂಪೂರ್ಣವಾಗಿ ಹದಗೆಟ್ಟು ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದೆ.



ಈ ಕುರಿತು ತಕ್ಷಣವೇ ರಸ್ತೆ ಮರು ಡಾಂಬರೀಕರಣ ಮಾಡಬೇಕು ಹಾಗೂ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಮಾದಿಗ ದಂಡೋರ (ಎಂ.ಆರ್.ಪಿ.ಎಸ್.) ಮೀಸಲಾತಿ ಹೋರಾಟ ಸಮಿತಿ ತಾಲೂಕಾ ಘಟಕ ಸುರಪುರ ವತಿಯಿಂದ ಹಂದ್ರಾಳ ಖಆ ಕ್ರಾಸ್ ನಲ್ಲಿ ಬೃಹತ್ ಪ್ರತಿಭಟನೆ ನಡೆಸಿ ಮನವಿ ಪತ್ರ ಸಲ್ಲಿಸಲಾಯಿತು. ದೇವಾಪುರ ಕ್ರಾಸ್‌ನಿಂದ ದೇವತ್ಕಲ್ ಗ್ರಾಮದವರೆಗಿನ ರಸ್ತೆಯುದ್ದಕ್ಕೂ ಬಿದ್ದಿರುವ ಬೃಹತ್ ಗುಂಡಿಗಳಿಂದಾಗಿ ಪ್ರತಿನಿತ್ಯ ಸಾರ್ವಜನಿಕರು ಹಾಗೂ ವಾಹನ ಸವಾರರು ಜೀವ ಕೈಯಲ್ಲಿ ಹಿಡಿದು ಸಂಚರಿಸುವಂತಾಗಿದೆ. ಇದರಿಂದಾಗಿ ನಿರಂತರವಾಗಿ ಅಪಘಾತಗಳು ಸಂಭವಿಸಿ ಸಾವು-ನೋವುಗಳು ಉಂಟಾಗುತ್ತಿವೆ.

ಈ ಬಗ್ಗೆ ಇಲಾಖೆಯ ಗಮನಕ್ಕೆ ತಂದರೂ ಯಾವುದೇ ಸೂಕ್ತ ಕ್ರಮ ಕೈಗೊಂಡಿರಲಿಲ್ಲ.

ಇದರಿಂದ ಆಕ್ರೋಶಗೊಂಡ ಪ್ರತಿಭಟನಾಕಾರರು ಸ್ಥಳದಲ್ಲೇ ಪ್ರತಿಭಟನೆ ನಡೆಸಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, ಉಪ ವಿಭಾಗ ಸುರಪುರ ಇವರ ಪರವಾಗಿ ಸ್ಥಳಕ್ಕೆ ಆಗಮಿಸಿದ ಇಲಾಖೆಯ ಸಿಬ್ಬಂದಿಗೆ ಮನವಿ ಪತ್ರವನ್ನು ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷರಾದ ಬಸವರಾಜ ಹಾದಿಮನಿ ಮಾತನಾಡಿ ದೇವಾಪುರ ಕ್ರಾಸ್‌ನಿಂದ ದೇವತ್ಕಲ್ ಗ್ರಾಮದವರೆಗೆ ರಸ್ತೆಯಲ್ಲಿ ತೋಡಿದ ಗುಂಡಿಗಳನ್ನು ತಕ್ಷಣ ಮುಚ್ಚಿ, ಸಂಪೂರ್ಣ ರಸ್ತೆಯನ್ನು ಪುನಃ ಡಾಂಬರೀಕರಣಗೊಳಿಸಬೇಕು. ಅವೈಜ್ಞಾನಿಕವಾಗಿ ರಸ್ತೆ ಅಗೆದು ಸಾರ್ವಜನಿಕರ ಪ್ರಾಣಕ್ಕೆ ಕಂಟಕ ತಂದೊಡ್ಡಿದ ತಪ್ಪಿತಸ್ಥರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಇಲಾಖೆಯು ತಕ್ಷಣವೇ ಕಾರ್ಯಪ್ರವೃತ್ತರಾಗಿ ರಸ್ತೆ ದುರಸ್ತಿಗೊಳಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಸ್ವರೂಪದ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು ಎಚ್ಚರಿಕೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಮಾದಿಗ ದಂಡೋರ (MRPS) ಪದಾಧಿಕಾರಿಗಳಾದ ಭೀಮರಾಯ ದೇವತ್ಕಲ್ ಲಕ್ಷ್ಮಣ ಆಲ್ದಾಳ ಈಶ್ವರ ಸತ್ಯಂಪೇಟ ಮಲ್ಲು ಹೆಚ್. ಹುಲಿಮನಿ ಅಂಬರೀಶ ಮ್ಯಾಗೇರಿ ಮಲ್ಲಿಕಾರ್ಜುನ್ ವಾಗನಗೇರಿ ರವಿಕುಮಾರ್ ವಾಗ್ಣಿಗೇರಿ ಚಂದ್ರಕಾಂತ್ ಗೌಡ ಹಂದ್ರಾಳ ಶಿವರಾಜ್ ಗೌಡ ಹಂದ್ರಾಳ ಬಿಸಿ ಪಾಟೀಲ್ ನಾಗರಾಳ್ ಹುಲುಗಪ್ಪ ದೇವತಕಲ್ ದುರ್ಗಪ್ಪ ಬಡಿಗೇರ್ ಹನುಮಂತ ನಾಗರಾಳ್ ಸದೇವಪ್ಪ ಬೆಣ್ಣಿ ಮಹೇಶ್ ಕುಮಾರ್ ಪರಮಪ್ಪ ಗುಡಿಮನಿ ಸಂಘಟನೆಯ ತಾಲೂಕು ಅಧ್ಯಕ್ಷರು, ಪ್ರಮುಖ ಮುಖಂಡರು, ಪದಾಧಿಕಾ-ರಿಗಳು, ಗ್ರಾಮಸ್ಥರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು

ದಸರಾ ಸಿಎಂ ಕಪ್ ಕುಸ್ತಿ: ಕಂಪ್ಲಿಯ ಬಿಂಗಿ ತೇಜಶ್ವನಿಗೆ ಬೆಳ್ಳಿ ಪದಕ

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ಪ್ರತಿಷ್ಠಿತ 'ಸಿಎಂ ಕಪ್' ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಇಲ್ಲಿನ ಸರ್ಕಾರಿ ಬಾಲಕಿಂ-ಚುರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಬಿಂಗಿ ತೇಜಶ್ವನಿ ಬೆಳ್ಳಿ ಪದಕ ಗೆದ್ದು ಸಾಧನೆ ಬರೆದಿದ್ದಾರೆ. ತನ್ಮೂಲಕ ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಕ್ರೀಡಾ ಕೀರ್ತಿಯನ್ನು ಹೆಚ್ಚಿಸಿದ್ದಾರೆ.



ಮೈಸೂರಿನಲ್ಲಿ ಪ್ರತಿವರ್ಷ ದಸರಾ ಹಬ್ಬದ ಸಾಂಸ್ಕೃತಿಕ ವೈಭವದ ಜೊತೆಗೆ ಆಯೋಜಿಸಲಾಗುವ ಈ ಕುಸ್ತಿ ಪಂದ್ಯಾವಳಿಗೆ ರಾಜ್ಯದ ವಿವಿಧ ಜಿಲ್ಲೆಗಳಿಂದ ನೂರಾರು ನು-ರಿತ ಮಹಿಳಾ ಹಾಗೂ ಪುರುಷ ಪಟುಗಳು ಆಗಮಿಸಿದ್ದರು. ಅತ್ಯಂತ ಕಠಿಣ ಹಾಗೂ ಪೈಪೋಟಿಯಿಂದ ಕೂಡಿದ್ದ ಮಹಿಳೆಯರ 76 ಕೆ.ಜಿ. ವಿಭಾಗದ ಫ್ರೀ ಸ್ಟೈಲ್ ಕುಸ್ತಿ ಸ್ಪರ್ಧೆಯಲ್ಲಿ ಕಂಪ್ಲಿಯ ತೇಜಶ್ವನಿ ಕಣಕ್ಕಿಳಿದಿದ್ದರು.

ಆರಂಭಿಕ ಸುತ್ತುಗಳಿಂದಲೇ ಕಣದಲ್ಲಿ ಅಬ್ಬರಿಸಿದ ಬಿಂಗಿ ತೇಜಶ್ವನಿ, ಬಲಿಷ್ಠ ಪ್ರತಿಸ್ಪರ್ಧಿಗಳ ಸವಾಲನ್ನು ತಮ್ಮ ಅದ್ಭುತ ಸಾಮರ್ಥ್ಯ, ಚುರುಕುತನ ಹಾಗೂ ಧೈರ್ಯದ ತಂತ್ರಗಾರಿಕೆಯಿಂದ ಮೆಟ್ಟಿ ನಿಂತರು. ಪ್ರೇಕ್ಷಕರ ಹರ್ಷೋದ್ಗಾರದ ನಡುವೆ ಸರಣಿ ಜಯ ಸಾಧಿಸುತ್ತಾ ಅಂತಿಮ ಸುತ್ತಿಗೆ (ಫೈನಲ್ಸ್) ಪ್ರವೇಶ ಗಿಟ್ಟಿಸಿಕೊಂಡರು. ಅಂತಿಮ ಕಾದಾಟದಲ್ಲಿ ತೀವ್ರ ಪೈಪೋಟಿ ನೀಡಿ ದ್ವಿತೀಯ ಸ್ಥಾನ ಪಡೆದು, ಬೆಳ್ಳಿ ಪದಕವನ್ನು ಮುಡಿಗೇರಿಸಿಕೊಂಡರು. ಗ್ರಾಮೀಣ ಭಾಗದ ಪ್ರತಿಭೆಯಾಗಿ ರಾಜ್ಯ ಮಟ್ಟದ ವೇದಿಕೆಯಲ್ಲಿ ಮಿಂಚಿದ ತೇಜಶ್ವನಿ ಅವರ ಈ ಮಹೋನ್ನತ ಸಾಧನೆಗೆ ಅವರ ತಂದೆ ಬಿಂಗಿ ಬೀರಲಿಂಗೇಶ್ವರ ಹಾಗೂ ಕುಟುಂಬಸ್ಥರು ಭಾವುಕರಾಗಿ ಹರ್ಷ ವ್ಯಕ್ತಪಡಿಸಿದ್ದಾರೆ. ಕಾಲೇಜಿನ ಪ್ರಾಚಾರ್ಯರು, ಉಪನ್ಯಾಸಕರು ಮತ್ತು ದೈಹಿಕ ಶಿಕ್ಷಣ ನಿರ್ದೇಶಕರು ಮಾತನಾಡಿ, "ವಿದ್ಯಾರ್ಥಿನಿಯ ಕಠಿಣ ಪರಿಶ್ರಮ ಹಾಗೂ ಕ್ರೀಡಾ ಪ್ರೇಮಕ್ಕೆ ಸಂದ ಜಯವಿದು.

ಗ್ರಾಮೀಣ ಭಾಗದ ಸರ್ಕಾರಿ ಕಾಲೇಜಿನ ವಿದ್ಯಾರ್ಥಿನಿಯೊಬ್ಬಳು ದಸರಾ ಸಿಎಂ ಕಪ್‌ನಂತಹ ದೊಡ್ಡ ವೇದಿಕೆಯಲ್ಲಿ ಪದಕ ಗೆದ್ದಿರುವುದು ಇಡೀ ಕಾಲೇಜಿಗೆ ಹೆಮ್ಮೆಯ ವಿಷಯ" ಎಂದು ಶ್ಲಾಘಿಸಿದ್ದಾರೆ. ಪಟ್ಟಣದ ಕ್ರೀಡಾಭಿಮಾನಿಗಳು ಹಾಗೂ ಸಾರ್ವಜನಿಕರು ವಿಜೇತ ಕ್ರೀಡಾಪಟುವಿಗೆ ಶುಭ ಹಾರೈಸಿದ್ದಾರೆ.

ಸ್ಟಿಂಗ್ ಆಪರೇಷನ್ : ಹಾಲಿ ನ್ಯಾಯಾಧೀಶರಿಂದ ತನಿಖೆಗೆ ಹೆಚ್ಡಿಕೆ ಆಗ್ರಹ

ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಸ್ಟಿಂಗ್ ಆಪರೇಷನ್ ವಿಚಾರದ ಬಗ್ಗೆ ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಸಲು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ರಾಜ್ಯಸರ್ಕಾರವನ್ನು ಆಗ್ರಹಿಸಿದರು.ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಟಿಂಗ್ ಆಪರೇಷನ್‌ನ ರೂವಾ-ರಿಗಳು ಯಾರು?, ಯಾರು ಮಾಡುತ್ತಿದ್ದಾರೆ?, ಅದರ ಹಿಂದಿರುವ ವ್ಯಕ್ತಿಗಳು ಯಾರು? ಎಂಬ ಸತ್ಯಾಂಶ ಹೊರತರಲು ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಸಂಶಯ ಬಂದರೆ ಕುಮಾರಸ್ವಾಮಿ ಅವರನ್ನು ವಶಕ್ಕೆ ಪಡೆದು ವಿಚಾರಣೆ ಮಾಡುತ್ತೇವೆ ಎಂದು ಗೃಹಸಚಿವ ಪ್ರಿಯಾಂಕ ಖರ್ಗೆ ಹೇಳಿದ್ದಾರೆ. ಪೊಲೀಸ್ ಆಯುಕ್ತರ ಕಚೇರಿಗೆ ನಾನೇ ಹೋಗಲು ಸಿದ್ಧ. ಬಂಧಿಸಲಿ. ಆರೋಪ ಮಾಡಿರುವುದು ನಾನು. ಅದನ್ನು ಬಿಟ್ಟು ಜೆಡಿಎಸ್ ಸಾಮಾಜಿಕ ಜಾಲತಾಣ ವಿಭಾಗದಲ್ಲಿ ಕೆಲಸ ಮಾಡುವ ಸಿಬ್ಬಂದಿಯನ್ನು ವಶಕ್ಕೆ ಪಡೆದು ಸಿನಿಮಾ ಮಾದರಿಯಲ್ಲಿ ಹೆದರಿಸಿ, ಬೆದರಿಸುವುದು ಏಕೆ? ಎಂದು ಪ್ರಶ್ನಿಸಿದರು. ನಮ ಪಕ್ಷದ ಸಿಬ್ಬಂದಿ ಮತ್ತು ಕಾರ್ಯಕರ್ತ-ರಿಗೆ ಏಕೆ ತೊಂದರೆ ಕೊಡುತ್ತೀರಿ? ಮುಖ್ಯಮಂತ್ರಿ ಮೊಬೈಲ್ ಮತ್ತು ಮುಖ್ಯಮಂತ್ರಿ ಕಚೇರಿಯಲ್ಲಿ ಕೆಲಸ ಮಾಡುವವರ ಮೊಬೈಲ್ ಅನ್ನು ತನಿಖೆ ಮಾಡಿದರೆ ಸತ್ಯಾಂಶ ಹೊರಬರಲಿದೆ ಎಂದರು.

ಮಾಧ್ಯಮದ ಹೆಸರು ಹೇಳಿಕೊಂಡು ಇಂತಹ ಕೆಲಸ ಮಾಡಿಕೊಂಡು ಬರುತ್ತಿರುವ ವ್ಯಕ್ತಿಗೆ ಏಕೆ ರಕ್ಷಣೆ ಕೊಡುತ್ತಿದ್ದೀರಿ? ಎಲ್ಲವೂ ಗೊತ್ತಿದ್ದು ಏಕೆ ಕ್ರಮ ಕೈಗೊಂಡಿಲ್ಲ? ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಂಶಯವಿದೆ ಎಂದು ಇಷ್ಟ ಬಂದಂತೆ ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಗೃಹಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಹರಿಹಾಯ್ದ ಅವರು, ನನ್ನ ತಾಳೆಯನ್ನು ಪರೀಕ್ಷೆ ಮಾಡಬೇಡಿ, ಹೋರಾಟಕ್ಕೆ ಸಿದ್ಧವಿದ್ದೇನೆ, ಅಖಾಡಕ್ಕೆ ಬನ್ನಿ ಎಂದು ಸವಾಲು ಹಾಕಿದರು.ರಾಜ್ಯದ ಡಿಜಿ ಆಗಿದ್ದ ಪೊಲೀಸ್ ಅಧಿಕಾರಿಯೊಬ್ಬರನ್ನು ಮುಗಿಸುತ್ತೇನೆ ಎಂದು ಹೇಳಿ ಕೊಲೆ ಬೆದರಿಕೆ ಹಾಕಿದ ವ್ಯಕ್ತಿಗೆ ಏಕೆ ರಕ್ಷಣೆ ಕೊಡುತ್ತಿದ್ದೀರಿ? ಎಂದು ಪ್ರಶ್ನಿಸಿದರು.

ಬಿಎಂಐಸಿ ಯೋಜನೆಯ ಅಕ್ರಮಗಳನ್ನು ಬಹಿರಂಗ ಮಾಡುತ್ತಿರುವುದನ್ನು ಜನತೆಗೆ ಹೋಗಬಾರದು ಎಂಬ ಉದ್ದೇಶದಿಂದ ಸಂಪುಟ ಸಭೆಯಲ್ಲಿ ಸ್ಟಿಂಗ್ ಆಪರೇಷನ್



ವಿಚಾರ ಪ್ರಸ್ತಾಪಿಸಿದ್ದಾರೆ ಎಂದು ಅವರು ಆರೋಪಿಸಿದರು.ಸಂಪುಟ ಸಭೆಯಲ್ಲಿ ನಡೆಯುವ ರಹಸ್ಯ ವಿಚಾರವನ್ನು ಮಾಧ್ಯಮಗಳಿಗೆ ನೀಡಿದವರು ಯಾರು?, ಅದಕ್ಕೂ ಮುನ್ನ ಖಾಸಗಿ ಹೋಟೆಲ್‌ನಲ್ಲಿ ಯಾವ ವ್ಯಕ್ತಿಯನ್ನು ಮುಖ್ಯಮಂತ್ರಿ ಭೇಟಿಯಾಗಿದ್ದರು?, ಅಲ್ಲದೆ ತಮ ಮನೆಗೆ ಅವರನ್ನು ಏಕೆ ಕರೆಸಿಕೊಂಡಿದ್ದೀರಿ ? ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ರ ವಿರುದ್ಧ ವಾಗ್ದಾಳಿ ನಡೆಸಿದರು. ಬಿಎಂಐಸಿ ಯೋಜನೆ ಗುತ್ತಿಗೆದಾರರು ನಿಮ ಮನೆಗೆ ಬಂದು ಹೋಗಿದ್ದಾರೆ. ಅವರನ್ನು 16 ಗಂಟೆವರೆಗೆ ವಾಹಿನಿಯೊಂದು ಸಂದರ್ಶನ ಮಾಡಿದೆ. ಈ ಸಂದರ್ಶನ ಎಲ್ಲಿ ಮಾಡಿದ್ದು? ಎಂದು ಅವರು ಪ್ರಶ್ನಿಸಿದರು.ಕಾಂಗ್ರೆಸ್‌ನವರು ನನ್ನ ನಿದ್ದೆ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ನಾನು ಚೆನ್ನಾಗಿ ನಿದ್ದೆ ಮಾಡುತ್ತಿದ್ದೇನೆ. ಅವರು ಸ್ಟಿಂಗ್ ಆಪರೇಷನ್ ಇ.ಡಿ ಭಯದಿಂದ ನಿದ್ದೆಗೆಟ್ಟಿರಬೇಕು ಎಂದು ಹೇಳಿದರು. ಸಾಮಾಜಿಕ ಜಾಲತಾಣದ ಸಿಬ್ಬಂದಿಯನ್ನು ಹೆದರಿಸಿ, ಬೆದರಿಸಿ ಹೇಳಿಕೆ ಪಡೆದು ಕುಮಾರಸ್ವಾಮಿಯವರನ್ನು ಸಿಲುಕಿಸಬೇಕು ಎಂಬ ಉದ್ದೇಶ ಹೊಂದಿದ್ದಾರೆ. ಹೆಣ್ಣುಮಗಳೊಬ್ಬಳ ಕೈಯಲ್ಲಿ ದೂರು ಪಡೆದು ಮಾಜಿ ಸಚಿವ ರೇವಣ್ಣ ಅವರನ್ನು ಜೈಲಿಗೆ ಕಳುಹಿಸಿದ ರೀತಿ ಅಂದುಕೊಂಡಿದ್ದರೆ ಅದು ನಿಮ ಭ್ರಮೆ ಎಂದರು

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಧ್ಯಮಗಳಲ್ಲಿ ಪ್ರಸಾರಕ್ಕೆ ತಡೆಯಾಜ್ಞೆ ತಂದಿದ್ದಾರೆ. ತಡೆಯಾಜ್ಞೆ ಪಡೆಯಲು ಎಲ್ಲಾ ವಿಚಾರವನ್ನೂ ಅವರು ಗೊತ್ತಿಲ್ಲದೆ ಉಲ್ಲೇಖಿಸಿದ್ದಾರೆ. ಏಕೆ ತಡೆಯಾಜ್ಞೆ ತರುತ್ತೀರಿ, ಧೈರ್ಯವಾಗಿ ಎದುರಿಸಿ ಎಂದು ಹೇಳಿದ್ದೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗಲೂ ಹನಿಟ್ರ್ಯಾಪ್ ವಿಚಾರದ ಮಾಹಿತಿ ಅವರಿಗೆ ಗೊತ್ತಿತ್ತು. ಆದರೂ ಮಾಧ್ಯಮದ ಸೋಗು ಹಾಕಿಕೊಂಡಿರುವ ವ್ಯಕ್ತಿಯ ಮನೆ ಹಾಗೂ ಕಾರ್ಯಕ್ರಮಗಳಿಗೆ 2011 ರಿಂದ 2025 ರವರೆಗೆ ಎಷ್ಟು ಬಾರಿ ಸಿದ್ದರಾಮಯ್ಯ ಹೋಗಿದ್ದರು? ಏಕೆ ಹೋಗಿದ್ದರು? ಎಂದು ಪ್ರಶ್ನಿಸಿದರು. ಸಿದ್ದರಾಮಯ್ಯ ಅವರ ಮೇಲೆ ಬಂದಿರುವ ಆರೋಪಗಳಿಗೆ ಅವರೇ ಪರಿಹಾರ ಕಂಡುಕೊಳ್ಳಬೇಕು ಎಂದ ಅವರು, ರಾಜ್ಯದ ಅಕ್ರಮಗಳ ವಿರುದ್ಧ ಹೋರಾಟ ಮಾಡುತ್ತಿರುವುದರಿಂದ ಅದನ್ನು ಹತ್ತಿಕ್ಕಲು ನನ್ನ ದನಿ ಅಡಗಿಸಲು ಇಂತಹ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ನನಗೆ ದನಿ ಕೊಟ್ಟಿರುವುದು ನಾಡಿನ ಜನರು ಹಾಗೂ ಪಕ್ಷದ ಕಾರ್ಯಕರ್ತರು.

ಅದನ್ನು ಅಡಗಿಸಲು ಆಗುವುದಿಲ್ಲ. ಭವಿಷ್ಯದಲ್ಲಿ ಕುಮಾರಸ್ವಾಮಿ ಹಾಗೂ ಕಾಂಗ್ರೆಸ್ ನಡುವೆಯೇ ಹೋರಾಟ ನಡೆಯಲಿದೆ ಎಂದರು. ಯಾರು ಏನೇ ಮಾಡಿದರೂ ಮೇಲಿರುವ ದೇವರು ನೋಡುತ್ತಿರುತ್ತಾನೆ. ಆ ದೇವರೇ ಅಂತಿಮ ತೀರ್ಪನ್ನು ನೀಡುತ್ತಾನೆ ಎಂದು ಮಾರ್ಮಿಕವಾಗಿ ನುಡಿದರು.ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು, ಮಾಜಿ ಶಾಸಕರಾದ ಎ.ಮಂಜುನಾಥ್, ರಮೇಶ್‌ಗೌಡ, ಸುರೇಶ್‌ಗೌಡ ಮತ್ತಿತರರು ಉಪಸ್ಥಿತರಿದ್ದರು.

ನೇಮಕಾತಿ ಪ್ರಕಟಣೆ

care ನೇಮಕಾತಿ 2026 – 55 ಡೆಪ್ಯುಟಿ ಜನರಲ್ ಮ್ಯಾನೇಜರ್ ಮತ್ತು ಜೂನಿಯರ್ ಮ್ಯಾನೇಜರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಅಕ್ಟೋಬರ್ 12, 2026

HLL Lifecare ನೇಮಕಾತಿ 2026: 55 ಡೆಪ್ಯುಟಿ ಜನರಲ್ ಮ್ಯಾನೇಜರ್ ಮತ್ತು ಜೂನಿಯರ್ ಮ್ಯಾನೇಜರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. HLL Lifecare ಲಿಮಿಟೆಡ್, ಅಕ್ಟೋಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಡೆಪ್ಯುಟಿ ಜನರಲ್ ಮ್ಯಾನೇಜರ್ ಮತ್ತು ಜೂನಿಯರ್ ಮ್ಯಾನೇಜರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಮಟ್ಟದ ಸರ್ಕಾರಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 21–ಅಕ್ಟೋಬರ್–2026 ರೊಳಗೆ ಅಥವಾ ಅಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: lifecarehll.com

ವಾರ ಬಂದಿ ಪದ್ಧತಿಯನ್ನು ಕೈ ಬಿಟ್ಟಿದ್ದಕ್ಕೆ ಸರಕಾರಕ್ಕೆ ಕೃತಜ್ಞತೆ ಸಲ್ಲಿಸುತ್ತೇವೆ–ಭೀಮರೆಡ್ಡಿ ಬೆಕ್ಕಿನಾಳ ಮುದನೂರು (ಬಿ)

ನೈಜ್ಯ ದೇಸೆ ನ್ಯೂಸ್

ಯಾದಗಿರಿ: ಜಿಲ್ಲೆಯ ಹುಣಸಗಿ ತಾಲೂಕಿನ ರೈತ ಮುಖಂಡರಾಗಿರತಕ್ಕಂತ ಭೀಮರೆಡ್ಡಿ ಬೆಕ್ಕಿನಾಳ ಮೂದನೂರು (ಬಿ) ಇವರು ಮಾತನಾಡಿ ಸರಕಾರಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಜಲ ಸಂಪನ್ಮೂಲ ಸಚಿವರಿಗೆ ಯಾದಗಿರಿ ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೆ ಹಾಗೆ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೆ ಮತ್ತು ಸ್ಥಳೀಯ ಶಾಸಕರಿಗೆ ಮತ್ತು ಕೆಬಿಜೆಎನ್ಎಲ್ ಅಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳಿದರು.



ಇದೇ ಸಂದರ್ಭದಲ್ಲಿ ಅವರು ಮಾತನಾಡಿ ಸರಕಾರ ರೈತರ ಮೇಲೆ ಕಣ್ಣು ತೆರೆದಂತಾಗಿದೆ ಎಂದು ಹೇಳಿದರು ಸರಕಾರ 5 ಗ್ಯಾರಂಟಿಗಳು ಕರ್ನಾಟಕ ಜನತೆಗೆ ಹೇಗೆ ಕೊಟ್ಟಿದೆಯೋ ಹಾಗೆ ರೈತರಿಗೆ ನೀರು ಕೊಟ್ಟು ರೈತ–ರಿಗೆ ಒಂದು ಗ್ಯಾರಂಟಿ ಕೊಟ್ಟ ಹಾಗೆ ಆಗಿದೆ ಎಂದು ಹೇಳಿದರು. ರೈತರ ಬೆಳೆದಿರುವಂತಹ ಬತ್ತ ಇನ್ನೇನು 25 ರಿಂದ 30 ದಿನಗಳ ಒಳಗಾಗಿ ಕಟಾವು ಹಂತಕ್ಕೆ ಬಂದಿರುತ್ತದೆ ಸರಕಾರ ಏನಾದರೂ ನೀರು ಕೊಡದಿದ್ದರೆ ನಮ್ಮ ರೈತರು ಬೀದಿಗೆ ಬರಬೇಕಾಗಿತ್ತು. ಸರಕಾರ ನಮಗೆ ನೀರು ಕೊಟ್ಟು ಒಳ್ಳೆಯ ಕೆಲಸ ಮಾಡಿದೆ ಎಂದು ಹೇಳಿದರು. ಸಂದರ್ಭದಲ್ಲಿ ಸ್ಥಳೀಯ ಸುರಪುರ ಮತಕ್ಷೇತ್ರದ ಶಾಸಕರಾಗಿರತಕ್ಕಂತ ಶ್ರೀ ರಾಜ ವೇಣುಗೋಪಾಲ್ ನಾಯಕ–ರಿಗೆ ರೈತರ ಪರವಾಗಿ ನಾನು ನೈಜ ದೇಶ ನ್ಯೂಸ್ ಮುಖಾಂತರ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ. ಹುಣಸಿಗಿ ತಾಲೂಕಿನ ರೈತ ಮುಖಂಡರು ಹಾಗೂ ವಿವಿಧ ಸಂಘಟನೆಯ ಪದಾಧಿಕಾರಿಗಳು ಮತ್ತು ರೈತರು ಪಾಲ್ಗೊಂಡಿದ್ದರು.

ನೂತನ ಡಿವೈಎಸ್ಪಿ ಸುಲೇಮಾನ್ ತಹಸೀಲ್ದಾರ್ ಅವರಿಗೆ ಟಿಪ್ಪು ಸುಲ್ತಾನ್ ಸಂಘದಿಂದ ಸನ್ಮಾನ

ನೈಜ್ಯ ದೇಸೆ ನ್ಯೂಸ್

ಲಿಂಗಸಗೂರು: ತಾಲೂಕಿಗೆ ನೂತನ ಡಿವೈಎಸ್ಪಿಯಾಗಿ ಆಗಮಿಸಿದ ಸುಲೇಮಾನ್ ತಹಸೀಲ್ದಾರ್ ಅವರನ್ನು ತಾಲೂಕು ಟಿಪ್ಪು ಸುಲ್ತಾನ್ ಸಂಘದ ವತಿಯಿಂದ ತಾಲೂಕು ಅಧ್ಯಕ್ಷ ಅಲ್ಲಾಬಕ್ಷ ಮನಿಯಾರ್ ಸನ್ಮಾನಿಸಿ ಶುಭ ಹಾರೈಸಿದರು. ಈ



ಸಂದರ್ಭದಲ್ಲಿ ಪದಾಧಿಕಾರಿಗಳಾದ ಶೇಕ್ ಹಮದ್ , ಅಶು , ಅಜರ , ಸೈಯದ್ ಇಮ್ರಾನ್ , ಮೆಹಬೂಬ್ , ಶಾಹಿದ್ ಹವಾಲ್ದಾರ್ , ಯುನೂಸ್ ಸೇರಿದಂತೆ ಇತರರು ಇದ್ದರು .

ಅಂಭಾ ಮಠದ ಪೀಠಾಧಿಪತಿ ನಾಮದೇವಗೌಡ ಶರಣರ ವಿರುದ್ಧದ ಆರೋಪಗಳು ಸತ್ಯಕ್ಕೆ ದೂರವಾದವು

ನೈಜ್ಯ ದೇಸೆ ನ್ಯೂಸ್

ದೇವದುರ್ಗ: ರಾಯಚೂರು ಜಿಲ್ಲೆಯ ಅರಕೇರಾ ತಾಲೂಕಿನ ಮದರಕಲ್ ಗ್ರಾಮದ ಅಂಭಾ ಮಠದ ಪೀಠಾಧಿಪತಿ ಸಂತ ನಾಮದೇವಗೌಡ ಶರಣರ ವಿರುದ್ಧ ಕೆಲವರು ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾಗಿವೆ ಎಂದು ಮದರಕಲ್ ಗ್ರಾಮದ ದೇವಣ್ಣ ಗೌಡ ನಾಯಕ್ ಮಾಲಿ ಪಾಟೀಲ್ ಹೇಳಿದರು.



ದೇವದುರ್ಗದಲ್ಲಿ ಗುರುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಭಾ ಮಠದ ಪೀಠಾಧಿಪತಿ ಸಂತ ನಾಮದೇವಗೌಡ ಶರಣರು ಜಾತಿ–ಭೇದವಿಲ್ಲದೆ ಎಲ್ಲರನ್ನೂ ಸಮಾನವಾಗಿ ಕಾಣುವ ವಿಶಾಲ ಮನೋಭಾವ ಹೊಂದಿದ್ದಾರೆ. ಪ್ರತಿಯೊಂದು ಹುಣ್ಣಿಮೆಯಂದು ಮಠದಲ್ಲಿ ಅನುಭಾವ ಕಾರ್ಯಕ್ರಮಗಳನ್ನು ಆಯೋಜಿಸುವುದರ ಜೊತೆಗೆ, ಸರ್ವಜನಾಂಗದ ಜನರಿಗೆ ಪ್ರತಿದಿನ ಪ್ರಸಾದದ ವ್ಯವಸ್ಥೆ ಮಾಡುತ್ತಿದ್ದಾರೆ. ಬಡವರು, ದಲಿತರು ಸೇರಿದಂತೆ ವಿವಿಧ ಧರ್ಮಗಳ ಜನರೊಂದಿಗೆ ಸ್ನೇಹಭಾವದಿಂದ ಬೆರೆಯುವ ಮೂಲಕ ಸಮಾಜದಲ್ಲಿ ಸೌಹಾರ್ದತೆ ಬೆಳೆಸುವ ಕಾರ್ಯದಲ್ಲಿ ತೊಡಗಿದ್ದಾರೆ ಎಂದು ತಿಳಿಸಿದರು.

ಹನುಮಗೌಡ ಮದರಕಲ್, ಸಿದ್ದನಗೌಡ ಮೂಡಲಗುಂಡ ಹಾಗೂ ಇತರರು ಅ. 14ರಂದು ಪತ್ರಿಕೆಗಳಿಗೆ ನೀಡಿದ ಹೇಳಿಕೆಯಲ್ಲಿ ಸ್ವಾಮೀಜಿಗಳ ವಿರುದ್ಧ ಮಾಡಿರುವ ಆರೋಪಗಳು ಆಧಾರರಹಿತವಾಗಿವೆ ಎಂದು ದೇವಣ್ಣ ಗೌಡ ನಾಯಕ್ ಮಾಲಿ ಪಾಟೀಲ್ ಪ್ರತಿಪಾದಿಸಿದರು. *ಮಠದ ಜಾಗದ ಕುರಿತು ಸ್ಪಷ್ಟನೆ* ಅಂಭಾ ಮಠದ ಜಾಗ ಅಕ್ರಮವಾಗಿದೆ ಎಂದು ಆರೋಪಿಸಿರುವುದು ಸರಿಯಲ್ಲ. ಈ ಹಿಂದೆ ಪತ್ರಿಕಾಗೋಷ್ಠಿ ನಡೆಸಿದ್ದ ಮುಖಂಡರೇ ತಮ್ಮ ಅವಧಿಯಲ್ಲಿ ಮಠದ ಜಾಗವನ್ನು ಮಠದ ಹೆಸರಿಗೆ ಸೇರಿಸುವ ಸಂಬಂಧ ಗ್ರಾಮ ಪಂಚಾಯಿತಿಯಲ್ಲಿ ನಿರ್ಣಯ ಅಂಗೀಕರಿಸುವ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು ಎಂದು ಅವರು ಹೇಳಿದರು.

ಪ್ರಸ್ತುತ ಮಠದ ಅಭಿವೃದ್ಧಿಯನ್ನು ಸಹಿಸದೆ ಕೆಲವರು ಸ್ವಾಮೀಜಿಗಳ ವಿರುದ್ಧ ಆರೋಪ ಮಾಡುತ್ತಿದ್ದಾರೆ ಎಂದು ದೂರಿದ ಅವರು, ಸಂತ ನಾಮದೇವಗೌಡ ಶರಣ–ರು ಸಮಾಜದಲ್ಲಿ ಜಾತ್ಯತೀತ ಮನೋಭಾವ, ಸಮಾನತೆ ಮತ್ತು ಸೌಹಾರ್ದತೆಯನ್ನು ಬೆಳೆಸಲು ಶ್ರಮಿಸುತ್ತಿದ್ದಾರೆ. ಹೀಗಾಗಿ, ಸ್ವಾಮೀಜಿಗಳ ವಿರುದ್ಧ ಮಾಡಲಾಗಿರುವ ಆರೋಪಗಳನ್ನು ಸತ್ಯಾಂಶಗಳ ಆಧಾರದ ಮೇಲೆ ಪರಿಶೀಲಿಸಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತ–ರಿದ್ದವರು ಪತ್ರಿಕಾಗೋಷ್ಠಿಯಲ್ಲಿ ಪಲಕನಮರಡಿ ಗ್ರಾಮದ ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಅಮರೇಶ್ ಪೊಲೀಸ್ ಪಾಟೀಲ್, ಸೋಮನಮರಡಿ ಗ್ರಾಮದ ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಕರಿಯಪ್ಪ, ಸಾಬಣ್ಣ ಹೂಗಾರ್, ನಾಯಕರ ಒಕ್ಕೂಟದ ದೇವದುರ್ಗ ತಾಲೂಕು ಅಧ್ಯಕ್ಷ ಚನ್ನಬಸವ ನಾಯಕ್ ಮ್ಯಾಕಲ್ದೊಡ್ಡಿ, ಹೊಸೂರು ಗ್ರಾಮದ ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ಬಸವರಾಜ್, ಮದರಕಲ್ ಗ್ರಾಮದ ಹನುಮಂತ ಬಡಿಗೇರ, ಹುಸೇನ್ ಸಾಬ್, ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ಮಾನಯ್ಯ, ಮೂಡಲಗುಂಡ ಗ್ರಾಮದ ಸಾಬಣ್ಣ, ಮೂಡಲಗುಂಡ ಗ್ರಾಮದ ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಅಂಬಣ್ಣ, ಧರ್ಮರಾಜ ಮದರಕಲ್ ಸೇ–ರಿದಂತೆ ಇತರರು ಉಪಸ್ಥಿತರಿದ್ದರು.

ಮಾದಕ ವಸ್ತುಗಳಿಂದ ಯುವಕರು ದೂರವಿರಬೇಕು.ಶ್ರೀ ಗುರುರಾಜ ಟಿ

ನೈಜ್ಯ ದೇಸೆ ನ್ಯೂಸ್

ಸಿಂಧನೂರು: ನಗರದ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಎಕ್ಸಲೆಂಟ್ ಪದವಿ ಪೂರ್ವ ಕಾಲೇಜಿನ ಎನ್ಎಸ್ಎಸ್ ಘಟಕದ ವತಿಯಿಂದ ಗ್ರಾಮೀಣ ಪೊಲೀಸ್ ಠಾಣೆಯ ಆವರಣವನ್ನು ಸ್ವಚ್ಛಗೊಳಿಸಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.



ಈ ಕಾರ್ಯಕ್ರಮದಲ್ಲಿ ಗ್ರಾಮೀಣ ಪೊಲೀಸ್ ಠಾಣೆಯ ಪಿ ಎಸ್ ಐ ಗಳಾದ ಶ್ರೀ ಗುರುರಾಜ್ ಟಿ ರವರು ಮಾತನಾಡುತ್ತಾ ನಶಮುಕ್ತ ಭಾರತವಾಗಬೇಕಾದರೆ ಯುವಕರು ದುಚ್ಚಟಗಳಿಂದ ದೂರವಿರಬೇಕು ಮತ್ತು ಇಂತಹ ಎನ್ಎಸ್ಎಸ್ ಘಟಕಗಳಿಂದ ಸಮಾಜಕ್ಕೆ ಒಳ್ಳೆಯ ಸಂದೇಶವನ್ನು ನೀಡುವ ಕಾರ್ಯಗಳನ್ನು ಈ ಒಂದು ಎನ್ ಎಸ್ ಎಸ್ ಘಟಕಗಳಿಂದ ಮಾಡಲಾಗುತ್ತದೆ ಹಾಗೂ ಯುವಕರು ಸದೃಢ ಭಾರತ ಕಟ್ಟುವಲ್ಲಿ ನಿಮ್ಮ ಪಾತ್ರ ಅಪಾರವಾಗಿದ್ದು ನನಗಲ್ಲ ನಿಮಗಾಗಿ ಎನ್ನುವ ಎನ್ಎಸ್ಎಸ್ ಧ್ಯೆಯ ವಾಕ್ಯದೊಂದಿಗೆ ಎನ್ಎಸ್ಎಸ್ ಘಟಕ ಮಾಡುವ ಕಾರ್ಯ ಶ್ಲಾಘನೀಯ ಎಂದರು. ಈ ಕಾರ್ಯಕ್ರಮದಲ್ಲಿ ಎಕ್ಸಲೆಂಟ್ ಕಾಲೇಜಿನ ಆಡಳಿತ ಮಂಡಳಿಯ ಪ್ರಾಚಾರ್ಯರು ಎಕ್ಸಲೆಂಟ್ ಪದವಿಪೂರ್ವ ಪ್ರತಿನಿಧಿಯಾದ ಶ್ರೀ ಖಾಸಿಂ ಖುರೇಷಿ ದಿದ್ದಿಗಿ ಮಾತನಾಡುತ್ತಾ ಎನ್ಎಸ್ಎಸ್ ಎಂದರೆ ಶಿಸ್ತು ಸಮಯಪ್ರಜ್ಞೆ ಮತ್ತು ಸಮಾಜದ ಕಾಳಜಿಯನ್ನ ವಹಿಸುವ ಒಂದು ತರಬೇತಿ ನೀಡುವ ಸಂಸ್ಥೆಯಾಗಿದೆ ಹಾಗೂ ಇಂದಿನ ಯುವಕರು ಸಮಾಜ ಸುಧಾರಣೆಯಲ್ಲಿ ತಮ್ಮನ ತಾವು ಅರ್ಪಿಸಿಕೊಳ್ಳಬೇಕೆಂದರು.

ಶ್ರೀ ತಿಮ್ಮಣ್ಣ ಕಲ್ಮಂಗಿ ಮಾತನಾಡುತ್ತಾ ನಶಮುಕ್ತ ಭಾರತ ಮಾಡಬೇಕಾದರೆ ಪೊಲೀಸ್ ಇಲಾಖೆಯ ಜೊತೆಗೆ ಎನ್ ಎಸ್ ಎಸ್ ಸ್ವಯಂ ಪ್ರೇರಿತಗೊಂಡ ಯುವಕರು ಸಾತ್ ನೀಡಿದರೆ ಉತ್ತಮ ಎಂದರು. ಶ್ರೀ ಜಮೀಲ್ ಅಹಮದ್ ಕಾಲೇಜು ಸಿಂಧನೂರು ಕು. ಮೆಹಬೂಬ್ ಕೋಳಬಾಳ. ಎನ್ಎಸ್ಎಸ್ ಅಧಿಕಾರಿಗಳು ಹಾಗೂ ಹನುಮೇಶ್ ಶ್ರೀ ವೀರೇಶ್ ತುರ್ವಿಹಾಳ ಹೆಡ್ ಕಾನ್ಸ್ಟೇಬಲ್ ಶ್ರೀ ಮಲ್ಲಿಕಾರ್ಜುನ್ ಶ್ರೀ ನಾಗಪ್ಪ ಶ್ರೀ ಅನುಪಮಾ ಶ್ರೀ ದ್ಯಾಮಣ್ಣ ಶ್ರೀ ಗೋಪಾಲ್ ಇತರೆ ಪೊಲೀಸ್ ಸಿಬ್ಬಂದಿ ವರ್ಗದವರು ಭಾಗಿಯಾಗಿದ್ದರು ಹಾಗೂ ಎನ್ಎಸ್ಎಸ್ ಶಿಬಿರಾರ್ಥಿಗಳು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು



ಕೆಸರಟ್ಟಿ ಗ್ರಾಮದ ಡಿಜಿಟಲ್ ಗ್ರಾಮ ಗ್ರಂಥಾಲಯದ ಮೇಲ್ವಿಚಾರಕರ ಆಯ್ಕೆಯಲ್ಲಿ ನಡೆದಿರುವ ನಿಯಮ ಉಲ್ಲಂಘನೆ ಮತ್ತು ಅಕ್ರಮವನ್ನು , ರದ್ದುಪಡಿಸುವಂತೆ ಜಾಂಭವ ಯುವ ಸೇನೆ ಒತ್ತಾಯ

ನೈಜ್ಯ ದೇಸೆ ನ್ಯೂಸ್

ಲಿಂಗಸಗೂರು: ಕೇಂದ್ರ ಸರ್ಕಾರದ Scheme for Special Assistance to States for Capital Investment ಹದಿಹರೆಯದವರ ಡಿಜಿಟಲ್ ಗ್ರಾಮ ಗ್ರಂಥಾಲಯಗಳ ನಿರ್ವಹಣೆಗಾಗಿ ತಾಲೂಕಿನ ಈಚನಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆಸರಟ್ಟಿ ಗ್ರಾಮಕ್ಕೂ ಗ್ರಂಥಾಲಯವನ್ನು ಮಂಜೂರು ಮಾಡಲಾಗಿರುತ್ತದೆ.

ಕೆಸರಟ್ಟಿ ಗ್ರಾಮದ ಡಿಜಿಟಲ್ ಗ್ರಾಮ ಗ್ರಂಥಾಲಯದ ಮೇಲ್ವಿಚಾರಕರ ಆಯ್ಕೆಯಲ್ಲಿ ನಡೆದಿರುವ ನಿಯಮ ಉಲ್ಲಂಘನೆ ಮತ್ತು ಅಕ್ರಮವನ್ನು , ರದ್ದುಪಡಿಸುವಂತೆ ಜಾಂಭವ ಯುವ ಸೇನೆಯ ತಾಲೂಕ ಅಧ್ಯಕ್ಷ ಶಶಿಕುಮಾರ್ ಕೆಸರಟ್ಟಿ ಕಾರ್ಯನಿರ್ವಾಹಕ ಅಧಿಕಾರಿ (ಇಓ)ಗೆ ಮನವಿಯನ್ನು ಸಲ್ಲಿಸಿದರು . ಉಲ್ಲೇಖಿತ ಪತ್ರದಲ್ಲಿ ಸರ್ಕಾರ ಮತ್ತು ತಾಲೂಕು ಪಂಚಾಯತಿಯು ಸ್ಪಷ್ಟವಾಗಿ ನಿಯಮಾವಳಿಗಳನ್ನು ರೂಪಿಸಿದೆ. ಅದರಂತೆ ಕಡ್ಡಾಯವಾಗಿ ಆಯಾ ಗ್ರಾಮದ ಸಂಜೀವಿನಿ



ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟದ (GPLF) ಅರ್ಹ ಮಹಿಳಾ ಸದಸ್ಯರನ್ನು ಮಾತ್ರ ಪಾರದರ್ಶಕವಾಗಿ ಆಯ್ಕೆ ಮಾಡಬೇಕಾಗಿರುತ್ತದೆ. ಆದರೆ ಕೆಸರಟ್ಟಿ ಗ್ರಾಮದಲ್ಲಿ ಈ ಎಲ್ಲಾ ನಿಯಮಗಳನ್ನು ಸಂಪೂರ್ಣವಾಗಿ ಗಾಳಿಗೆ ತೂರಲಾಗಿದೆ.

ಗ್ರಾಮಸ್ಥರಿಗಾಗಲಿ, ಸ್ಥಳೀಯ ಪಂಚಾಯಿತಿ ಸದಸ್ಯರಿಗಾಗಲಿ ಅಥವಾ ಸ್ಥಳೀಯ ಸಂಜೀವಿನಿ ಒಕ್ಕೂಟದ ಸದಸ್ಯ–ರಿಗಾಗಲಿ ಯಾವುದೇ ಮುನ್ಸೂಚನೆ ಅಥವಾ ಮಾಹಿತಿ ನೀಡದೆ, ಸ್ಥಳೀಯರಲ್ಲದ (ಬೇರೆ ಊರಿನ) ಅಭ್ಯರ್ಥಿಯನ್ನು ತಮಗೆ ಬೇಕಾದ ರೀತಿಯಲ್ಲಿ ಅಕ್ರಮವಾಗಿ ಆಯ್ಕೆ ಮಾಡಲಾಗಿದೆ. ಇದು ಸರ್ಕಾರದ ಮೂಲ ಆದೇಶ ಮತ್ತು ಪಾರದರ್ಶಕತೆಗೆ ವಿರುದ್ಧವಾಗಿದೆ. ಸ್ಥಳೀಯ ಅರ್ಹ ಮಹಿಳೆಯರ ಉದ್ಯೋಗದ ಹಕ್ಕನ್ನು ಕಸಿದುಕೊಳ್ಳುವ ವ್ಯವಸ್ಥಿತ ಸಂಚು ಇದಾಗಿದೆ. ಜಾಂಭವ ಯುವ ಸೇನೆ ಸಂಘಟನೆಯ ಬೇಡಿಕೆ :

1. ಕೆಸರಟ್ಟಿ ಗ್ರಾಮದ ಡಿಜಿಟಲ್ ಗ್ರಂಥ–ಾಲಯಕ್ಕೆ ಮಾಡಲಾಗಿರುವ ನಿಯಮ ಬಾಹಿರ ಹಾಗೂ ಸ್ಥಳೀಯರಲ್ಲದ ಅಭ್ಯರ್ಥಿಯ ಅಕ್ರಮ ಆಯ್ಕೆಯನ್ನು ತಕ್ಷಣವೇ ತಡೆಹಿಡಿದು. ರದ್ದುಪಡಿಸಬೇಕು.
2. ಈ ಅಕ್ರಮ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗಿಯಾಗಿರುವ ಅಧಿಕಾರಿಗಳು/ಸಿಬ್ಬಂದಿಗಳ ವಿರುದ್ಧ ಸೂಕ್ತ ತನಿಖೆ ನಡೆಸಬೇಕು.
3. ತಾಲೂಕು ಪಂಚಾಯತಿಯ ಮೂಲ ಆದೇಶದಂತೆ ಕೆಸರಟ್ಟಿ ಗ್ರಾಮದ ಸಂಜೀವಿನಿ ಒಕ್ಕೂಟದ (ಉಕಐಈ) ಸ್ಥಳೀಯ ಅರ್ಹ ಮಹಿಳಾ ಅಭ್ಯರ್ಥಿಗೆ ಮಾತ್ರ ಆದ್ಯತೆ ನೀಡಿ, ಪಾರದರ್ಶಕವಾಗಿ ಮರು ಆಯ್ಕೆ ಪ್ರಕ್ರಿಯೆ ನಡೆಸಬೇಕು.


ಒಂದು ವೇಳೆ ಈ ಅಕ್ರಮ ಆಯ್ಕೆಯನ್ನು ತಕ್ಷಣವೇ ರದ್ದುಪಡಿಸದಿದ್ದಲ್ಲಿ, ನಮ್ಮ ಜಾಂಭವ ಯುವ ಸೇನೆ ಸಂಘಟನೆಯ ವತಿಯಿಂದ ತಾಲೂಕ ಪಂಚಾಯತ್ ಕಾರ್ಯಾಲಯದ ಮುಂಭಾಗದಲ್ಲಿ ಪ್ರತಿಭಟನೆಯನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂದರು . ಈ ಸಂದರ್ಭದಲ್ಲಿ ಸುರೇಶ ಪ್ರಧಾನ ಕಾರ್ಯದರ್ಶಿ , ಹನುಮಂತ ಉಪಾಧ್ಯಕ್ಷ , ಹನುಮಪ್ಪ ಸಹ ಕಾರ್ಯದರ್ಶಿ , ನಾಗಪ್ಪ ಸೇರಿದಂತೆ ಇತರರು ಇದ್ದರು .

ನ.1ರಿಂದಕಾಲರ್ ಐಡಿ ಕಡ್ಡಾಯ : ಅಪರಿಚಿತ ಕರೆಗಳ ಕಿರಿಕಿರಿಗೆ ಬ್ರೇಕ್

ನೈಜ್ಯ ದೇಸೆ ನ್ಯೂಸ್

ನವದೆಹಲಿ: ಇನ್ನು ಮುಂದೆ ಯಾರ ಮೊಬೈಲ್‌ಗಳಿಗೂ ಅಪರಿಚಿತ ಕರೆಗಳು ಬರುವುದಿಲ್ಲ, ಏಕೆಂದರೆ ಭಾರತ ಸರ್ಕಾರವು ಬಳಕ ದೂರಸಂಪರ್ಕ ಇಲಾಖೆಯು ಟೆಲಿಕಾಂ ಸೇವಾ ಪೂರೈಕೆದಾರರಿಗೆ 2026ರ ನವೆಂಬರ್ 1ರಿಂದ ಕಾಲಿಂಗ್ ನೇಮ್ ಪ್ರೆಸೆಂಟೇಶನ್ ವ್ಯವಸ್ಥೆಯನ್ನು ಜಾರಿಗೆ ತರುವಂತೆ ನಿರ್ದೇಶನ ನೀಡಿದೆ.

ಸಿಎನ್ಎಪಿ ಎಂಬುದು ಭಾರತದ ಪರಿಶೀಲಿಸಲ್ಪಟ್ಟ ಕಾಲರ್ ಗುರುತಿಸುವಿಕೆ ವ್ಯವಸ್ಥೆಯಾಗಿದ್ದು, ಇದು ಕರೆ ಮಾಡುವವರ ಸಂಖ್ಯೆ ಮತ್ತು ಹೆಸರನ್ನು ಪ್ರದರ್ಶಿಸುತ್ತದೆ. ದೂರಸಂಪರ್ಕ ಇಲಾಖೆಯ ಆದೇಶದ ಪ್ರಕಾರ, 4ಜಿ ಮತ್ತು 5ಜಿಯಂತಹ ಉನ್ನತ ತಲೆಮಾ–ರಿನ ಮೊಬೈಲ್ ನೆಟ್‌ವರ್ಕ್‌ಗಳನ್ನು ಬಳಸುವ ಪ್ರತಿಯೊಬ್ಬ ಬಳಕೆದಾರರಿಗೂ ಸೌಲಭ್ಯವು ಪೂರ್ವನಿಯೋಜಿತವಾಗಿ ಲಭ್ಯವಿರುತ್ತದೆ. ನಿಮಗೆ ಕರೆ ಬಂದಾಗ, ಕರೆ ಮಾಡುವವರ ಹೆಸರು



ಮತ್ತು ಸಂಖ್ಯೆಯನ್ನು ಪರದೆಯ ಮೇಲೆ ತೋ–ರಿಸುತ್ತದೆ. 2ಜಿ ಮತ್ತು 3ಜಿ ನೆಟ್‌ವರ್ಕ್‌ಗಳು ಹಾಗೂ ಸಾರ್ವಜನಿಕ ಟೆಲಿಫೋನ್ ನೆಟ್‌ವರ್ಕ್‌ಗಳಲ್ಲಿ ಇದನ್ನು ಜಾರಿಗೊಳಿಸುವ ಬಗ್ಗೆ ಪ್ರತ್ಯೇಕವಾಗಿ ಪರಿಶೀಲಿಸಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿದೆ. ಕಾಲರ್ ಐಡಿ ಹೇಗೆ ಕಾರ್ಯನಿರ್ವಹಿಸುತ್ತದೆ? ಆದೇಶದ ಪ್ರಕಾರ, ಕರೆ ಬಂದಾಗ ಪರದೆಯ ಮೊದಲ ಭಾಗದಲ್ಲಿ ಕರೆ ಮಾಡುವವರ ಸಂಖ್ಯೆ ಕಾಣಿಸಿಕೊಳ್ಳುತ್ತದೆ. ಎರಡನೇ ಭಾಗದಲ್ಲಿ, ಕರೆ ಸ್ವೀಕರಿಸುವವರ ಸಂಪರ್ಕ ಪಟ್ಟಿಯಲ್ಲಿ ಉಳಿಸಲಾದ ಹೆಸರು ಕಾಣಿಸುತ್ತದೆ. ಒಂದು ವೇಳೆ ಆ ಸಂಖ್ಯೆಯನ್ನು ಸಂಪರ್ಕ ಪಟ್ಟಿಯಲ್ಲಿ ಉಳಿಸದಿದ್ದರೆ, ದೇಶೀಯ ಕರೆಗಳ ಸಂದರ್ಭದಲ್ಲಿ, ಕರೆ ಮಾಡುವವರ ಟೆಲಿಕಾಂ ಆಪರೇಟರ್‌ನ ಡೇಟಾಬೇಸ್‌ನಲ್ಲಿ ದಾಖಲಾಗಿರುವ ಹೆಸರನ್ನು ತೋರಿಸಲಾಗುತ್ತದೆ. ಅಂತರರಾಷ್ಟ್ರೀಯ ಕರೆಗಳ ಸಂದರ್ಭದಲ್ಲಿ, ಪರದೆಯ ಮೇಲೆ ಅಂತರರಾಷ್ಟ್ರೀಯ ಕರೆ ಎಂದು ಪ್ರದರ್ಶಿಸಲಾಗುತ್ತದೆ.

ಪ್ರತಿಯೊಂದು ಟೆಲಿಕಾಂ ಸೇವಾ ಪೂರೈಕೆದಾರರು, ತಮ್ಮ ಚಂದಾದಾರರ ಹೆಸರುಗಳನ್ನು ಅವರ ಸಂಖ್ಯೆಗಳೊಂದಿಗೆ ಜೋಡಿಸುವ ಡೇಟಾಬೇಸ್ ಅನ್ನು ರಚಿಸಬೇಕು, ನಿರ್ವಹಿಸಬೇಕು ಮತ್ತು ಕಾರ್ಯಗತಗೊಳಿಸಬೇಕು. ಕರೆ ಸ್ವೀಕರಿಸುವ ಆಪರೇಟರ್ ಈ ಡೇಟಾಬೇಸ್‌ನಿಂದ ಹೆಸರನ್ನು ಪಡೆದು, ಕರೆ ಸ್ವೀಕರಿಸುವ ಬಳಕೆದಾರರಿಗೆ ತೋರಿಸುತ್ತಾರೆ. ವ್ಯಾಪಾರ ಅಥವಾ ಬೃಹತ್ ಸಂಪರ್ಕಗಳ ವಿಷಯದಲ್ಲಿ, ಆಪರೇಟರ್‌ಗಳು ತಮ್ಮ ದಾಖಲೆಗಳಲ್ಲಿರುವ ಹೆಸ–ರಿನ ಬದಲಿಗೆ, ಬಳಕೆದಾರರು ಬಯಸುವ ಹೆಸರನ್ನು ಪ್ರದರ್ಶಿಸುವ ಆಯ್ಕೆಯನ್ನು ನೀಡಬಹುದು.

ಆದರೆ, ಈ ಹೆಸರು ಟ್ರೇಡ್ ಮಾರ್ಕ್ ರಿಜಿಸ್ಟ್ರಿಯಲ್ಲಿ ಬಳಕೆದಾರರ ಹೆಸರಿನಲ್ಲಿ ನೋಂದಾಯಿಸಲ್ಪಟ್ಟ ಟ್ರೇಡ್ ಮಾರ್ಕ್ ಆಗಿರಬೇಕು ಅಥವಾ ಸರಕು ಮತ್ತು ಸೇವಾ ತೆರಿಗೆ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ವ್ಯಾಪಾರ ಹೆಸರಾಗಿರಬೇಕು. ಆಪರೇಟರ್‌ಗಳು ಈ ಹೆಸರನ್ನು ಮತ್ತು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸುವುದು ಕಡ್ಡಾಯವಾಗಿದೆ. ಈಗಾಗಲೇ ಸೇವೆ ಪಡೆಯುತ್ತಿರುವ ಚಂದಾದಾರರು, ತಮಗೆ ಬೇಕಾದ ಹೆಸರನ್ನು ಅಪ್‌ಡೇಟ್ ಮಾಡಲು ಅರ್ಜಿ ಸಲ್ಲಿಸಬೇಕಾಗುತ್ತದೆ.

ವಚನ ದರ್ಶನ

ಶೂಲದ ಮೇಲಣ ವಿಭೋಗವೇನಾದಡೇನೊ?ನಾನಾ ವರ್ಣದ ಸಂಸಾರ ಹಾವು ಹಾವಡಿಗನ ಸ್ನೇಹದಂತೆ!ತನ್ನಾತ್ಮ ತನಗೆ ಹಗೆಯಾದ ಮತ್ತೆಬಿನ್ನಾಣವುಂಟೆ, ಮಹಾದಾನಿ ಕೂಡಲಸಂಗಮದೇವಾ.

ಶೂಲದ ಮೇಲಣ ವಿಭೋಗವೇನಾದಡೇನೊ" ಎಂಬುದು 12ನೆಯ ಶತಮಾನದ ಪ್ರಸಿದ್ಧ ಸಮಾಜ ಸುಧಾರಕ ಹಾಗೂ ಶಿವಶರಣ ಜಗಜ್ಯೋತಿ ಬಸವಣ್ಣನವರ ಒಂದು ಅತ್ಯಂತ ಅರ್ಥಗರ್ಭಿತ ವಚನವಾಗಿದೆ. ಈ ವಚನವು ಲೌಕಿಕ ಸುಖದ ನಶ್ವರತೆ ಮತ್ತು ಆತ್ಮಸಾಕ್ಷಿಯ ಮಹತ್ವವನ್ನು ಮಾರ್ಮಿಕವಾಗಿ ವಿವರಿಸುತ್ತದೆ.

ಲೌಕಿಕ ಸುಖದ ಭ್ರಮೆ ಮರಣದಂಡನೆ ವಿಧಿಸಿ ಶೂಲಕ್ಕೇರಿಸಿದ ವ್ಯಕ್ತಿಗೆ ರಾಜಭೋಗ, ಸುಗಂಧ ದ್ರವ್ಯಗಳು ಅಥವಾ ಉತ್ತಮ ಸತ್ಕಾರಗಳನ್ನು ನೀಡಿದರೆ ಅದರಿಂದ ಏನು ಪ್ರಯೋಜನ? ಸಾವು ನಿಶ್ಚಿತವಾಗಿರುವಾಗ ಆ ಕ್ಷಣಿಕ ಭೋಗಗಳು ಹೇಗೆ ವ್ಯರ್ಥವೋ, ಹಾಗೆಯೇ ಈ ಲೌಕಿಕ ಜಗತ್ತಿನ ಮಾಯಾ ಸುಖಗಳೂ ಸಹ ಕ್ಷಣಿಕವಾಗಿವೆ.

ಸಂಸಾರದ ನಶ್ವರತೆ
ನಾನಾ ವರ್ಣಗಳಿಂದ (ಬಣ್ಣಗಳಿಂದ) ಕೂಡಿರುವ ಈ ಸಂಸಾರವು ಹಾವಾಡಿಗ ಮತ್ತು ಹಾವಿನ ಸ್ನೇಹದ ಹಾಗೆ. ಹಾವಾಡಿಗನು ಹಾವನ್ನು ಎಷ್ಟು ಪ್ರೀತಿಯಿಂದ ಸಾಕಿದರೂ, ಅದು ಯಾವಾಗ ಕಚ್ಚುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಹಾಗೆಯೇ ಈ ಪ್ರಾಪಂಚಿಕ ಜೀವನವೂ ನಂಬಿಕೆಗೆ ಅರ್ಹವಲ್ಲ.

ಆತ್ಮಸಾಕ್ಷಿಯ ಜಾಗೃತಿ
ಒಬ್ಬ ಮನುಷ್ಯನಿಗೆ ತನ್ನ ಸ್ವಂತ ಆತ್ಮವೇ ಶತ್ರುವಾದ ಮೇಲೆ (ಅಂದರೆ ಅವನ ಆತ್ಮಸಾಕ್ಷಿಯೇ ಅವನ ತಪ್ಪುಗಳನ್ನು ಕಂಡು ಚುಚ್ಚುತ್ತಿರುವಾಗ), ಅವನು ಲೋಕದ ಎದುರು ಎಷ್ಟೇ ಜಾಣ್ಮೆ, ಜ್ಞಾನ ಅಥವಾ ಚಾತುರ್ಯವನ್ನು ಪ್ರದರ್ಶಿಸಿದರೂ ಅದಕ್ಕೆ ಯಾವ ಬೆಲೆಯೂ ಇರುವುದಿಲ್ಲ ಎಂಬುವುದು ಈ ವಚನದ ತಾತ್ಪರ್ಯ ವಚನಗಳು ಮನುಕುಲದ ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ–ಸಿಂಧನೂರು. 998094144

ಎಮ್ಮಿಗನೂರು: ಕಲಾಂ ಕನಸಿನಂತೆ ಪ್ರತಿ ಮಗುವೂ ವಿದ್ಯಾವಂತರಾಗಲಿ ? ಎಚ್.ಪಿರಾವಲಿ ಕರೆ

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ತಾಲೂಕಿನ ಎಮ್ಮಿಗನೂರ ನಲ್ಲಿ ಭಾರತದ ಹೆಮ್ಮೆಯ ಮಾಜಿ ರಾಷ್ಟ್ರಪತಿ, ಮಿಸೈಲ್ ಮ್ಯಾನ್ ಡಾ. ಎಪಿಜೆ ಅಬ್ದುಲ್ ಕಲಾಂ ಅವರ ಜನ್ಮ ದಿನಾಚರಣೆಯನ್ನು ಇಲ್ಲಿನ ಡಾ. ಅಬ್ದುಲ್ ಕಲಾಂ ಎಸ್.ಪಿ. ಚಾರಿಟೇಬಲ್ ಫೌಂಡೇಶನ್ (ರಿ) ವತಿಯಿಂದ ಇಂದು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.



ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಎಚ್.ಪಿರಾವಲಿ ಅವರು, "ಡಾ. ಅಬ್ದುಲ್ ಕಲಾಂ ಅವರು ಇಂದಿನ ತಲೆಮಾರಿನ ಮಕ್ಕಳಿಗೆ ದಾರಿದೀಪ ಹಾಗೂ ಆದರ್ಶಪ್ರಾಯರಾಗಿದ್ದಾರೆ. ಪ್ರತಿಯೊಂದು ಮಗುವೂ ಶಿಕ್ಷಣವಂತರಾಗಿ ದೇಶದ ಪ್ರಗತಿಗೆ ಕೊಡುಗೆ ನೀಡಬೇಕು ಎನ್ನುವುದು ಕಲಾಂ ಅವರ ದೊಡ್ಡ ಕನಸಾಗಿ–ತ್ತು. ಅವರ ಆಶಯದಂತೆಯೇ ಸಮಾಜದ ಪ್ರತಿಯೊಂದು ಮಗುವಿಗೂ ಗುಣಮಟ್ಟದ ಶಿಕ್ಷಣ ಸಿಗುವಂತೆ ಮಾಡುವುದೇ ನಮ್ಮ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ" ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಪಶು ವೈದ್ಯಾಧಿಕಾರಿಗಳಾದ ಶ್ರೀ ದೇವೇಂದ್ರಪ್ಪ ಹಾಗೂ ಶ್ರೀ ವಿನಯ್ ಕುಮಾರ್ ಅವರು ಡಾ. ಕಲಾಂ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು. ಬಳಿಕ ನೆರೆದಿದ್ದ ಮಕ್ಕಳಿಗೆ ಡಾ. ಕಲಾಂ ಅವರ ಸರಳ ಜೀವನ, ಮಹೋನ್ನತ ಸಾಧನೆಗಳು ಮತ್ತು ಜೀವನದಲ್ಲಿ ಶಿಕ್ಷಣ ಅಳವಡಿಸಿಕೊಳ್ಳುವುದರ ಮಹತ್ವದ ಕು–ರಿತು ಮನವರಿಕೆ ಮಾಡಿಕೊಡಲಾಯಿತು. ಕಾರ್ಯಕ್ರಮದಲ್ಲಿ ಸ್ಥಳೀಯ ನಾಯಕರು ಹಾಗೂ ಅಪಾರ ಸಂಖ್ಯೆಯ ಮಕ್ಕಳು ಉಪಸ್ಥಿತರಿದ್ದರು.

ಇಂದಿರಾ ಗಾಂಧಿ ಹೆಸರಿನಲ್ಲಿದ್ದ 3 ಪ್ರಮುಖ ಪಿಂಚಣಿ ಯೋಜನೆಗಳಿಗೆ ಮರುನಾಮಕರಣ

❑ ನೈಜ್ಯ ದೆಸೆ ನ್ಯೂಸ್

ನವದೆಹಲಿ: ಅಸಹಾಯಕ ನಾಗರಿಕರ ಸಾಮಾಜಿಕ ಭದ್ರತೆಗಾಗಿ ಜಾರಿಯಲ್ಲಿರುವ ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮದಡಿ ಇಂದಿರಾ ಗಾಂಧಿ ಅವರ ಹೆಸರಿನಲ್ಲಿದ್ದ ಮೂರು ಪ್ರಮುಖ ಪಿಂಚಣಿ ಯೋಜನೆಗಳಿಂದ ಇಂದಿರಾ ಗಾಂಧಿ ಹೆಸರನ್ನು ಕೈಬಿಟ್ಟು, ಅವುಗಳಿಗೆ ಪ್ರಧಾನ ಮಂತ್ರಿ ಎಂದು ಕೇಂದ್ರ ಸರ್ಕಾರ ಹೊಸದಾಗಿ ನಾಮಕರಣ ಮಾಡಿದೆ.



ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದ್ದು, ಈ ಯೋಜನೆಗಳನ್ನು 2026–27ರಿಂದ 2030–31ರವರೆಗೆ ಮುಂದಿನ ಐದು ವರ್ಷಗಳ ಕಾಲ ಮುಂದುವ–ರಿಸಲು ಬರೋಬ್ಬರಿ 53,428 ಕೋಟಿ ರೂ. ಅನುದಾನಕ್ಕೆ ಅನುಮೋದನೆ ನೀಡಲಾಗಿದೆ. ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಪಿಂಚಣಿ ಯೋಜನೆಗೆ ಪ್ರಧಾನಮಂತ್ರಿ ಸಾಮಾಜಿ–ಕ ಸಹಾಯತಾ ಯೋಜನೆ, ಇಂದಿರಾ ಗಾಂಧಿ ರಾಷ್ಟ್ರೀಯ ವಿಧವಾ ಪಿಂಚಣಿ ಯೋಜನೆಗೆ ಪ್ರಧಾನಮಂತ್ರಿ ವೃದ್ಧಾಪ್ಯ ಪಿಂಚಣಿ ಯೋಜನೆ ಎಂದು, ಇಂದಿರಾ ಗಾಂಧಿ ರಾಷ್ಟ್ರೀಯ ಅಂಗವೈಕಲ್ಯ ಪಿಂಚಣಿ ಯೋಜನೆಗೆ ಹಾಗೂ ಪ್ರಧಾನಮಂತ್ರಿ ವಿಧವಾ ಪಿಂಚಣಿ ಯೋಜನೆಗೆ ಪ್ರಧಾನಮಂತ್ರಿ ದಿವ್ಯಾಂಗಜನ ಪಿಂಚಣಿ ಯೋಜನೆ ಎಂದು ಮರುನಾಮಕರಣ ಮಾಡಲಾಗಿದೆ.

ಕೇವಲ ಹೆಸರು ಬದಲಾವಣೆ ಮಾತ್ರವಲ್ಲದೆ, ದಿವ್ಯಾಂಗರಿಗೆ ನೀಡಲಾಗುವ ಪಿಂಚಣಿ ನಿಯಮಗಳಲ್ಲಿ ಸರ್ಕಾರ ಹಲವು ಪ್ರಮುಖ ಸಡಿಲಿಕೆ ಮತ್ತು ಸುಧಾರಣೆಗಳನ್ನು ತಂದಿದೆ. ಈ ಹಿಂದೆ ಕನಿಷ್ಠ ಶೇ. 80ರಷ್ಟು ತೀವ್ರ ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳಿಗೆ ಮಾತ್ರ ಕೇಂದ್ರ ಸರ್ಕಾರದ ಈ ಪಿಂಚಣಿ ಲಭ್ಯವಿತ್ತು. ಈಗ ಆ ಮಾನದಂಡವನ್ನು ಶೇ. 40ಕ್ಕೆ ಇಳಿಸಲಾಗಿದೆ. ಇದರಿಂದ ದೇಶದ ಲಕ್ಷಾಂತರ ಹೆಚ್ಚುವರಿ ವಿಕಲಚೇತನರು ಯೋಜನೆಯ ವ್ಯಾಪ್ತಿಗೆ ಬರಲಿದ್ದಾರೆ. ಹಿಂದೆ ಕನಿಷ್ಠ 18 ವರ್ಷ ತುಂಬಿದ ಬಳಿಕವೇ ಅರ್ಜಿ ಸಲ್ಲಿಸಲು ಅವಕಾಶವಿತ್ತು. ಈಗ ಜನನದ ಸಮಯದಿಂದಲೇ (0–79 ವರ್ಷದವರೆಗೆ) ಮಾಸಿಕ 375 ರೂ. ಹಾಗೂ 80 ವರ್ಷ ಮೇಲ್ಪಟ್ಟ ಹಿರಿಯ ದಿವ್ಯಾಂಗರಿಗೆ 625 ರೂ. ವರೆಗೆ ಕೇಂದ್ರದ ಮಾಸಿಕ ನೆರವು ಸಿಗಲಿದೆ.

ಈ ಯೋಜನೆಯಿಂದ ದೇಶದ ಸುಮಾರು 3.2 ಕೋಟಿ (32 ಮಿಲಿಯನ್) ವೃದ್ಧರು, ವಿಧವೆಯರು ಮತ್ತು ದಿವ್ಯಾಂಗರಿಗೆ ನೇರ ಆರ್ಥಿಕ ಭದ್ರತೆ ಮುಂದುವರಿಯಲಿದೆ.

ಸಿರವಾರದಲ್ಲಿ ಸೊಳ್ಳೆಗಳ ಕಾಟ ಮಿತಿಮೀರಿದೆ: ಪಟ್ಟಣ ಪಂಚಾಯತಿಯ ನಿರ್ಲಕ್ಷ್ಯಕ್ಕೆ ಸಾರ್ವಜನಿಕರ ಆಕ್ರೋಶ

❑ ನೈಜ್ಯ ದೆಸೆ ನ್ಯೂಸ್

ಅ15: ಸಿರವಾರ ಪಟ್ಟಣದಲ್ಲಿ ಸೊಳ್ಳೆಗಳ ಹಾವಳಿ ಮಿತಿಮೀರಿದ್ದು, ಪಟ್ಟಣ ಪಂಚಾಯತಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪಟ್ಟಣದ ಸೊಳ್ಳೆಗಳ ಕಾಟದಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. ಸೊಳ್ಳೆಗಳ ನಿಯಂತ್ರಣಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು. ಚರಂಡಿಗಳ ಸ್ವಚ್ಛತೆ, ನಿಂತ ನೀರಿನ ತೆರವು ಹಾಗೂ ಸೊಳ್ಳೆ ನಿಯಂತ್ರಣ ಔಷಧ ಸಿಂಪಡಣೆಗೆ ಆದ್ಯತೆ ನೀಡಬೇಕು ಎಂದು ಸಾರ್ವಜನಿಕರು ಒತ್ತಾಯಿಸುತ್ತಿದ್ದಾರೆ



ಪಟ್ಟಣದ ಹಲವು ವಾರ್ಡ್‌ಗಳಲ್ಲಿ ಚರಂಡಿ ನೀರು ಸರಾಗವಾಗಿ ಹರಿಯದೆ ನಿಂತಿದ್ದು, ಕಸ ವಿಲೇವಾರಿ ಸರಿಯಾಗಿ ಆಗುತ್ತಿಲ್ಲ. ಇದರಿಂದ ಸೊಳ್ಳೆಗಳು ಹೆಚ್ಚಾಗಿ ಹರಡುತ್ತಿದ್ದು, ಸಂಜೆಯಾಗುತ್ತಿದ್ದಂತೆ ಮನೆಯಿಂದ ಹೊರಬರಲು ಆಗದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ನಾಗರಿಕರು ದೂರಿದ್ದಾರೆ. ಇದೇ ಪರಿಸ್ಥಿತಿ ಮುಂದುವರಿದರೆ ಮುಂದಿನ ದಿನಗಳಲ್ಲಿ ಮಲೇ–ರಿಯಾ, ಡೆಂಗ್ಯೂ, ಚಿಕೂನ್ ಗುನ್ಯಾ ರೀತಿಯ ಕಾಯಿಲೆಗಳು ಹರಡುವ ಭೀತಿ ಎದುರಾಗಿದೆ. ಆದ್ದರಿಂದ ಈಗಲೇ ಎಚ್ಚೆತ್ತುಕೊಳ್ಳಬೇಕು ಎಂದು ಸಾರ್ವಜನಿಕರು ಎಚ್ಚರಿಸಿದ್ದಾರೆ. ಕೂಡಲೇ ಪಟ್ಟಣ ಪಂಚಾಯತಿ ಅಧಿಕಾರಿಗಳು ಎಲ್ಲಾ ವಾರ್ಡ್‌ಗಳಲ್ಲಿ ಸ್ವಚ್ಛತಾ ಕಾರ್ಯ ಕೈಗೊಂಡು, ಫಾಗಿಂಗ್ ಮಾಡಿಸಿ, ಔಷಧಿ ಸಿಂಪಡಣೆ ಮಾಡಿ ಸೊಳ್ಳೆ ನಿವಾರಣೆಗೆ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಗಮನಹರಿಸಬೇಕಿದೆ.

ಸ್ಟಿಂಗ್ ಆಪರೇಷನ್ ತನಿಖೆಗೆ ಎಸ್‌ಐಟಿ ರಚನೆ ಕುರಿತು ಸಂಪುಟದಲ್ಲಿ ಚರ್ಚೆ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ರಾಜ್ಯದಲ್ಲಿ ಭಾರೀ ಸದ್ದು ಮಾಡಿರುವ ಸ್ಟಿಂಗ್ ಆಪರೇಷನ್ ಜಾಲವನ್ನು ತನಿಖೆ ನಡೆಸಲು ಎಸ್ ಐ ಟಿ ರಚಿಸುವ ಕುರಿತು ಸಚಿವ ಸಂಪುಟದಲ್ಲಿ ಚರ್ಚೆಯಾಗಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ವಿಧಾನಸೌಧದ ಸಚಿವ ಸಂಪುಟ ಸಭಾಂಗಣದಲ್ಲಿಂದು ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಹಲವು ಮಹತ್ವದ ವಿಷಯಗಳ ಕುರಿತು ಚರ್ಚೆ ನಡೆಸಲಾಗಿ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳು ಹಾಗೂ ನೀತಿ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿದೆ.

ಸಚಿವ ಸಂಪುಟ ಸಭೆಯಲ್ಲಿ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರನ್ನು ಗು–ರಿಯಾಗಿಸಿಕೊಂಡು ನಡೆದಿದೆ ಎನ್ನಲಾದ ಕುಟುಕು ಕಾರ್ಯಾಚರಣೆ ಮತ್ತು ನಕಲಿ ದೃಶ್ಯಾವಳಿಗಳ ವಿವಾದ ಪ್ರಮುಖವಾಗಿ ಚರ್ಚೆಗೆ ಬಂದಿದೆ. ಈ ಪ್ರಕರಣದ ಹಿಂದೆ ನಡೆದಿರುವ ಸಂಚು ಹಾಗೂ ಸಂಬಂಧಪಟ್ಟ ವಿಚಾರಗಳ ಕುರಿತು ಸಮಗ್ರ ತನಿಖೆ ನಡೆಸುವ ಸಲುವಾಗಿ ವಿಶೇಷ ತನಿಖಾ ತಂಡ ರಚಿಸುವ ಕುರಿತು ಚರ್ಯಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಗೆ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಮುಂದಿನ ಕಾನೂನು ಕ್ರಮಗಳ ಬಗ್ಗೆಯೂ ಸಂಪುಟ ಸಭೆಯಲ್ಲಿ ಚರ್ಚಿಸಲಾಗಿದೆ.

ರಾಜ್ಯದಲ್ಲಿ ಹೆಚ್ಚಿಸಲಾದ ಮೀಸಲಾತಿ ಪ್ರಮಾಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ತೀರ್ಪು ನೀಡಿರುವುದರಿಂದ, ಅದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲನವಿ ಸಲ್ಲಿಸುವ ಮೂಲಕ ಅವಕಾಶ ವಂಚಿತ ಸಮುದಾಯಗಳ ಹಿತಾಸಕ್ತಿಗಳನ್ನು ರಕ್ಷಿಸಲು ಸರ್ಕಾರ ಮುಂದಾಗಿದೆ ಎಂದು ಹೇಳಲಾಗಿದೆ. ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಕರ್ನಾಟಕ ನಾಗರಿಕ ವಿಮಾನಯಾನ ನೀತಿ–2026ಕ್ಕೆ ಸಂಪುಟ ಸಭೆ ಅನುಮೋದನೆ ನೀಡುವ ಸಾಧ್ಯತೆ ಇದೆ. ವಿಮಾನಯಾನ ಕ್ಷೇತ್ರದ ಅಭಿವೃದ್ಧಿ, ಸಂಪರ್ಕ ವ್ಯವಸ್ಥೆಯ ಸುಧಾರಣೆ ಹಾಗೂ ರಾಜ್ಯದಲ್ಲಿ ವಿಮಾನಯಾನ ಮೂಲಸೌಕರ್ಯ



ವಿಸ್ತರಣೆಗೆ ಈ ನೀತಿ ನೆರವಾಗುವ ನಿರೀಕ್ಷೆಯಿದೆ.

ಮೈಸೂರು ಜಿಲ್ಲೆಯ ಇಮಾವು ಸಮೀಪ 160 ಎಕರೆ ಪ್ರದೇಶದಲ್ಲಿ ಚಿತ್ರನಗರಿ ನಿರ್ಮಿಸುವ ಯೋಜನೆಗೂ ಸಂಪುಟದಲ್ಲಿ ಚರ್ಚೆಯಗುವ ಸಾಧ್ಯತೆ ಇದೆ. ಈ ಯೋಜನೆಗೆ 729.43 ಕೋಟಿ ಅನುದಾನ ಒದಗಿಸುವ ಪ್ರಸ್ತಾವನೆ ಇದೆ.ಚಿತ್ರರಂಗಕ್ಕೆ ಅಗತ್ಯವಾದ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಚಲನಚಿತ್ರ ನಿರ್ಮಾಣ ಚಟುವಟಿಕೆಗಳಿಗೆ ಉತ್ತೇಜನ ನೀಡುವುದು ಈ ಯೋಜನೆಯ ಉದ್ದೇಶವಾಗಿದೆ. ಶೃಂಗೇರಿ ಕ್ಷೇತ್ರದಲ್ಲಿ ತುಂಗಾ ನದಿಗೆ ಅಡ್ಡಲಾಗಿ ತಡೆಗೋಡೆ ನಿರ್ಮಿಸುವ ಕಾಮಗಾರಿಗೆ 83 ಕೋಟಿ ಮಂಜೂರು ಮಾಡುವ ಸಾಧ್ಯತೆ ಇದೆ.

ಈ ಯೋಜನೆಯಿಂದ ಸ್ಥಳೀಯ ನೀರಾವರಿ ಹಾಗೂ ಜಲಸಂಪನೂಲ ನಿರ್ವಹಣೆಗೆ ನೆರವಾಗುವ ನಿರೀಕ್ಷೆಯಿದೆ. ಬೆಂಗಳೂರು ನಗರದ ಯಶವಂತಪುರ ಮತ್ತು ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರಗಳಲ್ಲಿನ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಒದಗಿಸುವುದು, ಕುಡಿಯುವ ನೀರು ಪೂರೈಕೆ ಮತ್ತು ಆರೋಗ್ಯ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸುವ ವಿವಿಧ ಯೋಜನೆಗಳಿಗೂ ಅನುಮೋದನೆ ನೀಡುವ ಸಾಧ್ಯತೆ ಇದೆ.

ವಿಶೇಷವಾಗಿ ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಸಾರ್ವಜನಿಕ ಸೌಲಭ್ಯಗಳ ಸುಧಾರಣೆಗೆ ಒತ್ತು ನೀಡಲಾಗಿದೆ. ರಾಜ್ಯದ ಅಭಿವೃದ್ಧಿ,ಸಾಮಾಜಿಕನ್ಯಾಯ,ಮೂಲಸೌಕರ್ಯ ವಿಸ್ತರಣೆ ಮತ್ತು ವಿವಾದಾತ್ಮಕ ವಿಷಯಗಳ ಕುರಿತು ಕಾನೂನು ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿದೆ.

ಬರ ಪರಿಹಾರ ಹಾಗೂ ಬಾಕಿ ಪಿಂಚಣಿ ಬಿಡುಗಡೆಗೆ ಆಗ್ರಹಿಸಿ ಕಂಪ್ಲಿ ತಹಶೀಲ್ದಾರರಿಗೆ ಮನವಿ

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ರಾಜ್ಯದಲ್ಲಿ ಮುಂಗಾರು ವಿಫಲತೆಯಿಂದ ವ್ಯಾಪಕ ಬರಗಾಲ ಆವ–ರಿಸಿದ್ದು, ತಕ್ಷಣವೇ ಬರ ಪರಿಹಾರ ಕಾಮಗಾರಿ ಆರಂಭಿಸಬೇಕು ಹಾಗೂ ಬಾಕಿ ಇರುವ ಸಾಮಾಜಿಕ ಪಿಂಚಣಿಗಳನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು ತಹಶೀಲ್ದಾರರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.



ದೇವದಾಸಿ ವಿಮೋಚನಾ ಸಂಘ, ಒಂಟಿ ಮಹಿಳೆಯರ ಸಂರಕ್ಷಣ ಸಂಘ ಹಾಗೂ ಮಸಣ ಕಾರ್ಮಿಕರ ಸಂಘದ ಜಂಟಿ ಆಶ್ರಯದಲ್ಲಿ ಈ ಪ್ರತಿಭಟನಾತ್ಮಕ ಮನವಿ ಸಲ್ಲಿಕೆ ನಡೆಯಿತು. ಬರಗಾಲದಿಂದಾಗಿ ರೈತರು ಎಕರೆಗೆ 25,000 ರೂ.ಗೂ ಅಧಿಕ ನಷ್ಟ ಅನುಭವಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಉದ್ಯೋಗ ಖಾತರಿ ಯೋಜನೆ ಸಮರ್ಪಕವಾಗಿ ಜಾರಿಯಾಗದ ಕಾರಣ ಬಡವರು ವಲಸೆ ಹೋಗುತ್ತಿದ್ದಾರೆ. ಇದರ ನಡುವೆ ವೃದ್ಧರು, ಅಂಗವಿಕಲರು ಹಾಗೂ ದೇವದಾಸಿ ಮಹಿಳೆಯರ ಮಾಸಿಕ ಪಿಂಚಣಿಯನ್ನು ಬಾಕಿ ಉಳಿಸಿಕೊಂಡಿರುವುದು ಬಡ ಕುಟುಂಬಗಳನ್ನು ಹಸಿವಿನ ದವಡೆಗೆ ತಳ್ಳಿದೆ ಎಂದು ಪದಾಧಿಕಾ–ರಿಗಳು ಆಕ್ರೋಶ ವ್ಯಕ್ತಪಡಿಸಿದರು.

ಪ್ರಮುಖ ಬೇಡಿಕೆಗಳಾದ ಕೆಲಸದ ದಿನಗಳನ್ನು 200 ದಿನಗಳಿಗೆ ವಿಸ್ತರಿಸಿ, ಕನಿಷ್ಠದಿನಗೂಲಿಯನ್ನು424ರೂ.ಗೆಹೆಚ್ಚಿಸಬೇಕು. ಎಲ್ಲ ಪಡಿತರ ಚೀಟಿದಾರರಿಗೆ ಮಳೆಗಾಲದವರೆಗೆ ಅಕ್ಕಿ, ಜೋಳ ಸೇರಿದಂತೆ 14 ಅಗತ್ಯ ವಸ್ತುಗಳನ್ನು ಉಚಿತವಾಗಿ ನೀಡಬೇಕು. ?ಬಾಕಿ ಪಿಂಚಣಿ ಬಿಡುಗಡೆ ಮಾಡಿ ಮಾಸಿಕ 6,000 ರೂ.ಗೆ ಹೆಚ್ಚಿಸಬೇಕ್ಃ. ಎಕರೆಗೆ 20,000 ರೂ. ಬೆಳೆ ನಷ್ಟ ಪರಿಹಾರ ನೀಡಬೇಕು.

ದೇವದಾಸಿ, ಒಂಟಿ ಮಹಿಳೆಯರು ಮತ್ತು ಮಸಣ ಕಾರ್ಮಿಕರ ಗಣತಿ ಪೂರ್ಣಗೊಳಿಸಿ ಪುನರ್ವಸತಿ ಕಲ್ಪಿಸಬೇಕು ಹಾಗೂ 'ದೇವದಾಸಿ ನಿಷೇಧ ಕಾಯ್ದೆ–2025' ಅನ್ನು ತಕ್ಷಣ ಜಾರಿಗೊಳಿಸಬೇಕು.

ವಸತಿ ಮತ್ತು ಉಳುಮೆಗಾಗಿ ತಲಾ 5 ಎಕರೆ ಜಮೀನು ಹಾಗೂ ನಿರುದ್ಯೋಗಿ ಮಕ್ಕಳಿಗೆ ಮಾಸಿಕ 10,000 ರೂ. ಭತ್ಯೆ ಒದಗಿಸಬೇಕು ಎಂದು ಮನವಿ ಸಲ್ಲಿಕೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ಪ್ರಮುಖರಾದ ದುರುಗಮ್ಮ, ಎಸ್ವಾಮಿ, ಹೆಚ್. ದುರುಗಮ್ಮ, ಸಿ. ವೀರೇಶ ಸೇರಿದಂತೆ ನೂರಾರು ಮಹಿಳೆಯರು ಉಪಸ್ಥಿತರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಅಕ್ಟೋಬರ್ 16ರಂದು ದೆಹಲಿಯಲ್ಲಿ “ಲೆಹ್ರಾ ದೋ ತಿರಂಗಾ” ಪ್ರತಿಭಟನೆಗೆ ಕಾಕ್‌ರೋಚ್ ಜನತಾ ಪಕ್ಷದ ಕರೆ; ರಾಷ್ಟ್ರಧ್ವಜ ಹಾರಿಸುವುದು ಪ್ರಜಾಪ್ರಭುತ್ವದ ಹಕ್ಕು

❑ ನೈಜ್ಯ ದೆಸೆ ನ್ಯೂಸ್

ನವದೆಹಲಿ ಕಾಕ್‌ರೋಚ್ ಜನತಾ ಪಕ್ಷದ (CJP) ಸ್ಥಾಪಕ ಅಭಿಜೀತ್ ದೀಪ್ಕೆ ಅವರು 2026ರ ಅಕ್ಟೋಬರ್ 16ರ ಶುಕ್ರವಾರ ಸಂಜೆ 5 ಗಂಟೆಗೆ ಕನ್ನಾಟ್ ಪ್ಲೇಸ್‌ನ ಸೆಂಟ್ರಲ್ ಪಾರ್ಕ್‌ನಲ್ಲಿ “ಲೆಹ್ರಾ ದೋ ತಿರಂಗಾ” ಎಂಬ ಬೃಹತ್ ಪ್ರತಿಭಟನೆಗೆ ಸೇರಲು ನಾಗರಿಕರು ಮತ್ತು ಬೆಂಬಲಿಗರಿಗೆ ಕರೆ ನೀಡಿದ್ದಾರೆ.



ಪಕ್ಷದ ಹಿರಿಯ ನಾಯಕರಾದ ಸೌರವ್ ದಾಸ್ ಮತ್ತು ಆಶುತೋಷ್ ರಂಕಾ ಅವರನ್ನು ಪೊಲೀಸರು ವಶಕ್ಕೆ ಪಡೆದು ಐದು ದಿನಗಳ ನ್ಯಾಯಾಂಗ ಬಂಧನಕ್ಕೆ ಕಳುಹಿಸಿರುವುದಕ್ಕೆ ಪ್ರತಿಕ್ರಿಯೆಯಾಗಿ ಈ ಸಮಾವೇಶ ನಡೆಯಲಿದೆ. ಅಭಿಜೀತ್ ದೀಪ್ಕೆ ಹೇಳಿದರು: “ನಮ್ಮ ರಾಷ್ಟ್ರಧ್ವಜ ಹಾರಿಸುವುದು ದೇಶಭಕ್ತಿಯ ಮೂಲಭೂತ ಅಭಿವ್ಯಕ್ತಿ; ಅದು ಅಪರಾಧವಲ್ಲ. ಸಾರ್ವಜನಿಕ ಭಿನ್ನಮತದ ಮೇಲೆ ರಾಜ್ಯದ ಕಠಿಣ ಕ್ರಮ ಜನರ ಧ್ವನಿಯನ್ನು ಮೌನಗೊಳಿಸಲಾರದು. ಪ್ರಜಾಪ್ರಭುತ್ವದ ಹಕ್ಕುಗಳಲ್ಲಿ ನಂಬಿಕೆ ಇರುವ ಪ್ರತಿಯೊಬ್ಬರೂ ಈ ಶುಕ್ರವಾರ ತ್ರಿವರ್ಣ ಧ್ವಜದೊಂದಿಗೆ ಸೆಂಟ್ರಲ್ ಪಾರ್ಕ್‌ಗೆ ಬರಬೇಕು. ಧ್ವಜ ಹಿಡಿದಿರುವ ಕಾರಣಕ್ಕೆ ಶಾಂತಿಯುತ ನಾಗರಿಕರನ್ನು ಬಂಧಿಸಲು ಆಡಳಿತ ಬಯಸಿದರೆ, ಜೈಲುಗಳನ್ನು ಸಿದ್ಧಪಡಿಸಿಕೊಳ್ಳಲಿ.” ತಿಹಾರ್ ಜೈಲಿಗೆ ವರ್ಗಾಯಿಸುವ ಮೊದಲು ಅಎಕ ಸಹ–ಸಂಯೋಜ–ಕ ಆಶುತೋಷ್ ರಂಕಾ ಹೇಳಿದರು: “ನಮ್ಮ ಹೋರಾಟ ಸಂವಿಧಾನಾತ್ಮಕ ಹೊಣೆಗಾರಿಕೆ ಮತ್ತು ಪ್ರಜಾಪ್ರಭುತ್ವ ಪ್ರಕ್ರಿಯೆಗಳ ಸಮಗ್ರತೆಗಾಗಿ. ಪ್ರತಿಭಟನಾ ಸ್ಥಳಗಳನ್ನು ಮುಚ್ಚುವುದು ಮತ್ತು ಶಾಂತಿಯುತ ಪ್ರತಿಭಟನಾಕಾರರನ್ನು ಬಂಧಿಸುವುದು ಜನರ ಹಕ್ಕುಗಳ ಪರ ನಿಲ್ಲುವ ನಮ್ಮ ಸಂಕಲ್ಪವನ್ನು ಬಲಪಡಿಸುತ್ತದೆ.” ಜಂತರ್ ಮಂತರ್‌ನ ದಿಢೀರ್ ಪ್ರತಿಭಟನೆಯ ನಂತರ ವಿಶೇಷ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಸೌರವ್ ದಾಸ್ ಮತ್ತು ಆಶುತೋಷ್ ರಂಕಾ ಅವರನ್ನು ಐದು ದಿನಗಳ ಬಂಧನಕ್ಕೆ ಒಪ್ಪಿಸಿತು.

ಅದರ ಹಿಂದಿನ ದಿನವೇ ಜಂತರ್ ಮಂತರ್‌ನ ಅಧಿಕೃತ ಪ್ರತಿಭಟನಾ ಸ್ಥಳದ ಮಾನ್ಯತೆಯನ್ನು ಅಧಿಕಾರಿಗಳು ರದ್ದುಗೊಳಿಸಿದ್ದರು. ಭದ್ರತಾ ಬ್ಯಾರಿಕೇಡ್‌ಗಳನ್ನು ದಾಟಿದ ನಂತರ ಅತಿಕ್ರಮಣ ಮತ್ತು ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ದೆಹಲಿ ಪೊಲೀಸರು ನಾಯಕರನ್ನು ವಶಕ್ಕೆ ಪಡೆದರು. ನ್ಯಾಯಾಲಯದ ಮುಂದೆ ಸೌರವ್ ದಾಸ್ ರಾಷ್ಟ್ರಧ್ವಜ ಹಿಡಿದಿರುವ ನಾಗರಿಕರಿಗೆ ಶಿಕ್ಷೆ ವಿಧಿಸುವ ಕಾನೂನು ಆಧಾರವನ್ನು ಪ್ರಶ್ನಿಸಿದರು. ಪ್ರಜಾಪ್ರಭುತ್ವ ಪ್ರಕ್ರಿಯೆಗಳು ಮತ್ತು ಮತದಾರರ ಪಟ್ಟಿಯ ಪರಿಷ್ಕರಣೆ ಕುರಿತು ತಕ್ಷಣದ ಆಡಳಿತಾತ್ಮಕ ಹೊಣೆಗಾರಿಕೆಯ ಬೇಡಿಕೆಯನ್ನು ಅವರು ಪುನರುಚ್ಚರಿಸಿದರು. ಜಂತರ್ ಮಂತರ್‌ನಲ್ಲಿನ ಕ್ರಮ ಅಹಿಂಸಾತ್ಮಕವಾಗಿದ್ದು, ಶಾಂತಿಯುತ ಸಭೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಸಂವಿಧಾನಾತ್ಮಕ ಹಕ್ಕಿನ ವ್ಯಾಪ್ತಿಯಲ್ಲಿದೆ ಎಂದು ಹೇಳಿದರು.

ದೆಹಲಿಗೆ ಬರಲು ಸಾಧ್ಯವಾಗದವರು ಈ ಶುಕ್ರವಾರ ನಿಖರವಾಗಿ ಸಂಜೆ 5 ಗಂಟೆಗೆ ತಮ್ಮ ನಗರಗಳಲ್ಲಿ ಸಮಾನಾಂತರ 'ತಿರಂಗಾ ಮೆರವಣಿಗೆ'ಗಳನ್ನು ಆಯೋಜಿಸಬೇಕೆಂದು ಪಕ್ಷ ರಾಷ್ಟ್ರವ್ಯಾಪಿ ಕರೆ ನೀಡಿದೆ ಎಂದು ಅಭಿಜೀತ್ ಹೇಳಿದರು. ಶಿಸ್ತು ಮತ್ತು ಶಾಂತಿಯುತ ಒಗ್ಗಟ್ಟನ್ನು ಕಾಪಾಡಿಕೊಳ್ಳಲು ಅಎಕ ನಾಯಕರು ಮನವಿ ಮಾಡಿದ್ದಾರೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101